**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222**
**ಇ-ಮೇಲ್: shimuladmn@gmail.com**

---

# -: <u>ಕಾರ್ಮಿಕ ಗುತ್ತಿಗೆ ಟೆಂಡರ್</u> :-

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಈ ಕೆಳಗೆ ತಿಳಿಸಿದ್ದೇರಿ ಹಾಗೂ ಶೀತಲೀಕರಣ ಕೇಂದ್ರಗಳಲ್ಲಿ ಎರಡು ವರ್ಷಗಳ ಅವಧಿಗೆ ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಇ-ಟೆಂಡರ್ ಮೂಲಕ ಕರೆದ ಕಾರ್ಮಿಕ ಗುತ್ತಿಗೆ ಟೆಂಡರ್.**

| | |
|---|---|
| **<u>ಶಿವಮೊಗ್ಗ ಜಿಲ್ಲೆ</u>** | **: ಶಿವಮೊಗ್ಗ ಡೇರಿ, ತಡಗಣಿ ಶೀತಲೀಕರಣ ಕೇಂದ್ರದಲ್ಲಿ.** |
| **<u>ದಾವಣಗೆರೆ ಜಿಲ್ಲೆ</u>** | **: ದಾವಣಗೆರೆ ಡೇರಿಯಲ್ಲಿ.** |
| **<u>ಚಿತ್ರದುರ್ಗ ಜಿಲ್ಲೆ</u>** | **: ಚಿತ್ರದುರ್ಗ ಶೀತಲೀಕರಣ ಕೇಂದ್ರದಲ್ಲಿ.** |

| | |
|---|---|
| **ತುಂಬಿದ ಟೆಂಡರ್‌ಗಳನ್ನು ಒಕ್ಕೂಟಕ್ಕೆ ಇ-ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ, ವೇಳೆ** | **: 17-06-2022 ರ ಸಾಯಂಕಾಲ 4.00 ಗಂಟೆಯವರೆಗೆ** |

**ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ, ವೇಳೆ: ದಿನಾಂಕ: 20-06-2022ರ ಮಧ್ಯಾಹ್ನ 12.00 ಗಂಟೆಗೆ**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ-577 222

---

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಡೇರಿ ಹಾಗೂ ಶೀತಲೀಕರಣ ಕೇಂದ್ರಗಳಲ್ಲಿ ತುಂಡು ಗುತ್ತಿಗೆ ಕೆಲಸವನ್ನು ನಿರ್ವಹಿಸಲು ಕಾರ್ಮಿಕರನ್ನು ಒದಗಿಸುವ ಬಗ್ಗೆ.

## -: ಟೆಂಡರ್ ಫಾರಂನೊಂದಿಗೆ ಲಗತ್ತಿಸಿದ ದಾಖಲೆಗಳು :-

ಅನುಬಂಧ – ಎ : ಇ- ಟೆಂಡರ್ ಪ್ರಕಟಣೆ

ಅನುಬಂಧ – ಬಿ : ಟೆಕ್ನಿಕಲ್ ಟೆಂಡರ್ ಫಾರಂ ಭಾಗ -1

ಬಿ-1 : ಸಲ್ಲಿಸಬೇಕಾದ ದಾಖಲಾತಿಗಳ ಚೆಕ್‌ಲಿಸ್ಟ್ (ದಾಖಲಾತಿಗಳನ್ನು ಲಗತ್ತಿಸುವುದು.)

ಅನುಬಂಧ – ಸಿ : ಟೆಂಡರ್‌ಗೆ ಸಂಬಂಧಿಸಿದ ನಿಬಂಧನೆಗಳು (ಒಪ್ಪಿ ಸಹಿ ಮಾಡಿ ಲಗತ್ತಿಸುವುದು.)

ಅನುಬಂಧ – ಡಿ : ತುಂಡು ಗುತ್ತಿಗೆಯ ಆಧಾರದ ಮೇಲೆ ನಿರ್ವಹಿಸಬೇಕಾದ ಕೆಲಸದ ವಿವರಗಳು (ಒಪ್ಪಿ ಸಹಿ ಮಾಡಿ ಲಗತ್ತಿಸುವುದು.)

ಅನುಬಂಧ – ಇ : ತುಂಡು ಗುತ್ತಿಗೆ ಮೇಲೆ ನಿರ್ವಹಿಸಬೇಕಾದ ಕೆಲಸಗಳ ಹಾಲಿ ಸರಾಸರಿ ಅಂದಾಜು ದಿನವಹಿ ಪ್ರಮಾಣದ ವಿವರಗಳು (ಗಮನಿಸಿದಕ್ಕೆ ಸಹಿ ಮಾಡಿ ಲಗತ್ತಿಸುವುದು.)

ಅನುಬಂಧ – ಎಫ್ : ಕಮರ್ಷಿಯಲ್ ಟೆಂಡರ್ ಫಾರಂ ಭಾಗ -2 ಇ-ಟೆಂಡರ್ ನಲ್ಲಿದ್ದಂತೆ.

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ವಿವಿಧ ವರ್ಗೀಕೃತ ಕೆಲಸಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಇಚ್ಛೆಯುಳ್ಳ ಅರ್ಹ ಟೆಂಡರ್‌ದಾರರು ಇ-ಟೆಂಡರ್ ಮೂಲಕ ಟೆಂಡರ್ ಸಲ್ಲಿಸಬಹುದಾಗಿದೆ.

[ಟಿಪ್ಪಣಿ: ಟೆಂಡರ್ ಹಾಕುವ ಪೂರ್ವದಲ್ಲಿ ಇಚ್ಛೆಯುಳ್ಳ ಟೆಂಡರ್‌ದಾರರುಡೇರಿ ಹಾಗೂ ಶೀತಲೀಕರಣ ಕೇಂದ್ರಗಳಲ್ಲಿ ಗುತ್ತಿಗೆಗೆ ಕರೆದ ಕೆಲಸಗಳಿಗೆ ಸಂಬಂಧಿಸಿದಂತೆ ಹಾಲಿ ನಡೆಯುತ್ತಿರುವ ಕೆಲಸಗಳನ್ನು ಅಧಿಕಾರಿಗಳ ಅನುಮತಿ ಪಡೆದು ಕೆಲಸದ ವೇಳೆಯಲ್ಲಿ ಖುದ್ದಾಗಿ ಪರಿಶೀಲಿಸಬಹುದಾಗಿದೆ.]

ಅನುಬಂಧ – ' ಎ '

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222
ಇ–ಮೇಲ್: shimuladmn@gmail.com ವೆಬ್‌ಸೈಟ್: www.shimul.coop

ಸಂಖ್ಯೆ.ಶಿದಾಚಿಸಹಾಒ/ಆಡಳಿತ-4/ತು.ಗು.ಟೆಂ/1879/2022–23 ದಿನಾಂಕ: 02–06–2022

**–: ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಣೆಗೆ ಇ–ಟೆಂಡರ್ ಪ್ರಕಟಣೆ :–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಗೆ ಒಳಪಡುವ ಶಿವಮೊಗ್ಗ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಇರುವ ಡೇರಿ ಹಾಗೂ ಶೀತಲೀಕರಣ ಕೇಂದ್ರಗಳಲ್ಲಿ ಎರಡು ವರ್ಷಗಳ ಅವಧಿಗೆ ಈ ಕೆಳಕಂಡ ವರ್ಗೀಕೃತ ತುಂಡು ಗುತ್ತಿಗೆ ಕೆಲಸಗಳಿಗೆ ಟೆಂಡರ್ ಕರೆಯಲಾಗಿದೆ.

| | |
|---|---|
| A) | ಶಿವಮೊಗ್ಗ ಡೇರಿ ಮತ್ತು ದಾವಣಗೆರೆ ಡೇರಿಗಳಲ್ಲಿ ಉಪಹಾರ ಗೃಹಗಳ ನಿರ್ವಹಣೆ, ಅಡುಗೆ, ಊಟ, ಉಪಹಾರ ತಯಾರಿಕೆ ಮತ್ತು ವಿತರಣೆ. (ಕನಿಷ್ಟ ಕಾರ್ಮಿಕರ ಸಂಖ್ಯೆ: ಕುಶಲ–02, ಅರೆಕುಶಲ–03, ಕುಶಲರಲ್ಲದ–11 ಅಂದಾಜು 16) |
| B) | ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಮೇವಿನ ತಾಕುಗಳು, ಗಾರ್ಡನ್ ಹಾಗೂ ಔಷಧಿ ಸಸ್ಯಗಳ ತಾಕುಗಳ ಕೆಲಸಗಳ ನಿರ್ವಹಣೆ. (ಕುಶಲರಲ್ಲದ ಕನಿಷ್ಟ ಕಾರ್ಮಿಕರ ಸಂಖ್ಯೆ: ಅಂದಾಜು 09) |
| C) | ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆ. (ಕಂಪ್ಯೂಟರ್ ಆಪರೇಟರ್ ಕನಿಷ್ಟ ಕಾರ್ಮಿಕರ ಸಂಖ್ಯೆ: ಅಂದಾಜು 34) |

ಟೆಂಡರ್‌ದಾರರು ಪಿ.ಎಫ್., ಇ.ಎಸ್.ಐ, ಸರಕು ಮತ್ತು ಸೇವಾ ತೆರಿಗೆ, ಪ್ರೊಫೆಷನಲ್ ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ನೋಂದಣಿದಾರರಾಗಿದ್ದು, ಗುತ್ತಿಗೆ ಕೆಲಸ ನಿರ್ವಹಿಸಿದ ಬಗ್ಗೆ ಕಾಂಟ್ರಾಕ್ಟ್ ಲೇಬರ್ ಲೈಸೆನ್ಸ್ ಹೊಂದಿದವರಾಗಿರತಕ್ಕದ್ದು. ಅರ್ಹ ಗುತ್ತಿಗೆದಾರರು ಮೇಲೆ ತಿಳಿಸಿದ ವರ್ಗೀಕೃತವಾದ A ಅಥವಾ B ಅಥವಾ C ಕೆಲಸಗಳನ್ನು ಅಥವಾ ಎಲ್ಲಾ ಕೆಲಸಗಳನ್ನು ನಿರ್ವಹಿಸಲು 2 ಲಕೋಟೆ (ಟೆಕ್ನಿಕಲ್ ಟೆಂಡರ್ ಮತ್ತು ಕಮರ್ಷಿಯಲ್ ಟೆಂಡರ್) ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ:17–06–2022 ರಂದು ಸಾಯಂಕಾಲ 4.00 ಗಂಟೆಯವರೆಗೆ.

2) ಭರ್ತಿ ಮಾಡಿದ ಟೆಕ್ನಿಕಲ್ ಟೆಂಡರ್‌ಗಳನ್ನು ತೆರೆಯುವ ದಿನಾಂಕ:20–06–2022 ರ ಮಧ್ಯಾಹ್ನ 12.00 ಗಂಟೆಗೆ.

ಟೆಂಡರ್ ಸಂಬಂಧ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://eproc.karnataka.gov.in ಹಾಗೂ ಒಕ್ಕೂಟದ ವೆಬ್‌ಸೈಟ್: www.shimul.coop ಗಳಲ್ಲಿ ಪಡೆಯಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

**ಅನುಬಂಧ – ‘ ಬಿ ’**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222**

---

## –: ಟೆಕ್ನಿಕಲ್ ಟೆಂಡರ್ ಭಾಗ-1 :–

***ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ಟೆಕ್ನಿಕಲ್ ಟೆಂಡರಿಗೆ ಸಂಬಂಧಿಸಿದಂತೆ ನಾನು / ನಾವು ಸಲ್ಲಿಸುತ್ತಿರುವ ವಿವರಗಳು ಈ ಕೆಳಕಂಡಂತಿವೆ.***

| | | |
|---|---|---|
| 1 | ಗುತ್ತಿಗೆದಾರರ ಸಂಸ್ಥೆಯ ಹೆಸರು | |
| 2 | ನೋಂದಾಯಿತ ಕಚೇರಿಯ ವಿಳಾಸ | |
| 3 | ಕಚೇರಿಯ ದೂರವಾಣಿ / ಮೊಬೈಲ್ ಸಂಖ್ಯೆ | |
| 4 | ಪಾಲುಗಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರರ ಹೆಸರು ಮತ್ತು ವಿಳಾಸಗಳು | |
| 5 | ಸಂಸ್ಥೆಯು ಸ್ಥಾಪನೆಯಾದ ವರ್ಷ | |
| 6 | ರೀಜನಲ್ ಪ್ರಾವಿಡೆಂಟ್ ಫಂಡ್ ಕಮೀಷನರ್ ರವರ ಕಚೇರಿಯಿಂದ ಸಂಸ್ಥೆಯು ಹೊಂದಿದ ಭವಿಷ್ಯ ನಿಧಿ ನೋಂದಣಿ ಸಂಖ್ಯೆ | i) ನೋಂದಣಿ ಸಂಖ್ಯೆ: ___________<br>ii) ನೋಂದಣಿ ದಿನಾಂಕ: __________ |
| 7 | ನೌಕರರ ರಾಜ್ಯ ವಿಮಾ ನಿಗಮದಿಂದ (ESI) ಸಂಸ್ಥೆಯು ಹೊಂದಿದ ನೋಂದಣಿ ಸಂಖ್ಯೆ | i) ನೋಂದಣಿ ಸಂಖ್ಯೆ: ___________<br>ii) ನೋಂದಣಿ ದಿನಾಂಕ: __________ |
| 8 | ಅಂಗಡಿ / ವಾಣಿಜ್ಯ ಸಂಸ್ಥೆಗಳ ಕಾಯ್ದೆ ಅಡಿ ಕಾರ್ಮಿಕ ಇಲಾಖೆಯಿಂದ ಹೊಂದಿರುವ ನೋಂದಣಿ ಸಂಖ್ಯೆ (Form C ರಲ್ಲಿ) | i) ನೋಂದಣಿ ಸಂಖ್ಯೆ: ___________<br>ii) ನೋಂದಣಿ ದಿನಾಂಕ: __________<br>iii) ನೋಂದಣಿಯು ಎಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.<br>ದಿನಾಂಕ: ____________ |
| 9 | ಸರಕು ಮತ್ತು ಸೇವಾ ತೆರಿಗೆ (GST) ನೋಂದಣಿ ಸಂಖ್ಯೆ ಮತ್ತು ದಿನಾಂಕ | |
| 10 | ಕಾಂಟ್ರಾಕ್ಟ್ ಲೇಬರ್ ಆಕ್ಟ್ ಪ್ರಕಾರ ಕಾರ್ಮಿಕ ಇಲಾಖೆಯಿಂದ ಕಾರ್ಮಿಕ ಗುತ್ತಿಗೆ ಕೆಲಸ ನಿರ್ವಹಿಸಿದ ಬಗ್ಗೆ ಲೈಸೆನ್ಸ್ ಹೊಂದಿದ ವಿವರ (Form VI ರಲ್ಲಿ) | i) ಲೈಸೆನ್ಸ್ ಸಂಖ್ಯೆ: ___________<br>ii) ಲೈಸೆನ್ಸ್ ಪಡೆದ ದಿನಾಂಕ: __________<br>iii) ಲೈಸೆನ್ಸ್ ಪಡೆದ ಅವಧಿ ________ದಿನಾಂಕದಿಂದ _________ದವರೆಗೆ |
| 11 | Pan ಸಂಖ್ಯೆ ನಮೂದಿಸುವುದು ಹಾಗೂ ಛಾಯಾಪ್ರತಿ ಲಗತ್ತಿಸುವುದು. | |
| 12 | ಪ್ರೊಫೆಷನಲ್ ಟ್ಯಾಕ್ಸ್ ನೋಂದಣಿ ಸಂಖ್ಯೆ ಮತ್ತು ದಿನಾಂಕ | |

| 11 | ಈ ಟೆಂಡರಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ಸಂವೇದಕರ ನಿಧಿ(EMD) ಮೊತ್ತದ ವಿವರಗಳು: | | | |
|---|---|---|---|---|
| | ವರ್ಗೀಕೃತ ತುಂಡು ಗುತ್ತಿಗೆ ಕೆಲಸಗಳು | ನಿಗದಿತ ಇ.ಎಂ.ಡಿ. ಮೊತ್ತ ರೂ. | ಯಾವ ಕೆಲಸಕ್ಕೆ ಟೆಂಡರ್ ಹಾಕಿದೆಯೋ ಆ ಕೆಲಸದ ಮುಂದೆ (√ ) ಮಾರ್ಕ್ ಮಾಡುವುದು. | (√ ) ಮಾರ್ಕ್ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಪಾವತಿಸಿದ ಇ.ಎಂ.ಡಿ. ಮೊತ್ತ |
| A) | ಉಪಹಾರ ಗೃಹದ ನಿರ್ವಹಣೆ, ಅಡುಗೆ, ಊಟ, ಉಪಹಾರ ತಯಾರಿಕೆ ಮತ್ತು ವಿತರಣೆ | 20,000/- | | |
| B) | ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಮೇವಿನ ತಾಕುಗಳು, ಗಾರ್ಡನ್ ಹಾಗೂ ಔಷಧಿ ಸಸ್ಯಗಳ ತಾಕುಗಳ ಕೆಲಸಗಳ ನಿರ್ವಹಣೆ. | 10,000/- | | |
| C) | ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆ. | 20,000/- | | |

ಟೆಂಡರ್‌ಗೆ ಸಂಬಂಧಿಸಿದ ನಿಯಮಗಳಿಗೆ ಒಳಪಟ್ಟು ಈ ಟೆಕ್ನಿಕಲ್ ಟೆಂಡರ್ ಅನ್ನು ಸಲ್ಲಿಸುತ್ತಿದ್ದು, ಮೇಲೆ ತಿಳಿಸಿದ ವಿವರಗಳು ಸತ್ಯವಾಗಿರುವುದಾಗಿ ಪ್ರಮಾಣೀಕರಿಸುತ್ತೇನೆ. ಅಗತ್ಯ ದಾಖಲಾತಿಗಳ ಛಾಯಾಪ್ರತಿಗಳನ್ನು ಲಗತ್ತಿದ್ದು, ಮೂಲ ದಾಖಲೆಗಳನ್ನು ಟೆಂಡರ್ ತೆರೆಯುವ ದಿನದಂದು ಮತ್ತು ಮುಂದೆ ಒಕ್ಕೂಟ ಕೇಳಿದಾಗ ಹಾಜರುಪಡಿಸುತ್ತೇನೆ.

ದಿನಾಂಕ:

ಟೆಂಡರ್‌ದಾರರ ಸಹಿ ಮತ್ತು ಸೀಲು.

ಪೂರ್ಣ ಹೆಸರು :

**ಅನುಬಂಧ – 'ಬಿ–1'**

## ತಾಂತ್ರಿಕ ಟೆಂಡರ್ ತಪಶೀಲು ಪಟ್ಟಿ (Check list)

(* ಸಂಬಂಧಿಸಿದಕ್ಕೆ (√) ಮಾರ್ಕ್ ಮಾಡುವುದು)

| ಕ್ರ.ಸಂ | ಲಗತ್ತಿಸಿದ ವಿವರಗಳು | * ದೃಢೀಕರಣ |
|---|---|---|
| 1 | ನಿಗದಿಪಡಿಸಿದ ಮುಂಗಡ ಹಣ ಠೇವಣಿಗಾಗಿ (EMD) ಸಲ್ಲಿಸಲಾಗಿದೆಯೇ ? | ಹೌದು / ಇಲ್ಲ |
| 2 * | ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಸಂಸ್ಥೆಯನ್ನು ಕಾರ್ಮಿಕ ಇಲಾಖೆಯಿಂದ ನೋಂದಾಯಿಸಿದ ಬಗ್ಗೆ ಪಡೆದ ಚಾಲ್ತಿಯಲ್ಲಿರುವ ಪ್ರಮಾಣ ಪತ್ರದ ಪ್ರತಿ (ಫಾರಂ–ಸಿ) ಲಗತ್ತಿಸಿದೆಯೇ ? | ಹೌದು / ಇಲ್ಲ |
| 3 * | ಭವಿಷ್ಯ ನಿಧಿ (PF) ಕೋಡ್ ನಂಬರ್ ಮಂಜೂರು ಮಾಡಿದ ಭವಿಷ್ಯ ನಿಧಿ ಸಂಸ್ಥೆಯ ಪತ್ರದ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 4 * | ನೌಕರರ ರಾಜ್ಯ ವಿಮಾ (ESI) ಕೋಡ್ ನಂಬರ್ ಮಂಜೂರು ಮಾಡಿದ ನೌಕರರ ರಾಜ್ಯ ವಿಮಾ ನಿಗಮದ ಪತ್ರದ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 5 | ತುಂಡು ಗುತ್ತಿಗೆಯ ಕೆಲಸಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಕಾರ್ಮಿಕರನ್ನು ಒದಗಿಸಿದ ಸಂಸ್ಥೆಗಳ ವಿವರ ಮತ್ತು ಅವರಿಂದ ಪಡೆದು ದಾಖಲಾತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 6 * | ಸರಕು ಮತ್ತು ಸೇವಾ ತೆರಿಗೆ (GST) ನೋಂದಣಿ ಪತ್ರ ಲಗತ್ತಿಸಿದೆಯೇ ? | ಹೌದು / ಇಲ್ಲ |
| 7 * | ಕಾಂಟ್ರಾಕ್ಟ್ ಲೇಬರ್ ಆಕ್ಟ್ ಪ್ರಕಾರ ಕಾರ್ಮಿಕ ಇಲಾಖೆಯಿಂದ ಪಡೆದ ಲೇಬರ್ ಲೈಸೆನ್ಸ್ ಪ್ರತಿ (ಫಾರಂ–6) ಲಗತ್ತಿಸಿದೆಯೇ ? | ಹೌದು / ಇಲ್ಲ |
| 8 * | ಪ್ರೊಫೆಷನಲ್ ಟ್ಯಾಕ್ಸ್ ನೋಂದಣಿ ಪತ್ರ ಲಗತ್ತಿಸಿದೆಯೇ ? | ಹೌದು / ಇಲ್ಲ |
| 9 * | Pan card ಛಾಯಾ ಪ್ರತಿ ಲಗತ್ತಿಸಿದೆಯೇ ? | ಹೌದು / ಇಲ್ಲ |
| 10* | 2019–20 ನೇ ಆರ್ಥಿಕ ಸಾಲಿನ (2020–21 ನೇ ಅಸೆಸ್‌ಮೆಂಟ್ ಸಾಲಿನ) ಹಾಗೂ 2020–21 ನೇ ಆರ್ಥಿಕ ಸಾಲಿನ (2021–22 ನೇ ಅಸೆಸ್‌ಮೆಂಟ್ ಸಾಲಿನ) ಆದಾಯ ತೆರಿಗೆ ಸಲ್ಲಿಸಿರುವ ದಾಖಲೆ ಲಗತ್ತಿಸಿದೆಯೇ ? | ಹೌದು / ಇಲ್ಲ |
| 11 | ಅನುಬಂಧ ' ಸಿ ' ರಲ್ಲಿಯ ಟೆಂಡರ್ ನಿಬಂಧನೆಗಳನ್ನು ಒಪ್ಪಿ ಸಹಿ ಮಾಡಿ ಲಗತ್ತಿಸಿದೆಯೇ ? | ಹೌದು / ಇಲ್ಲ |

ದಿನಾಂಕ: ಟೆಂಡರ್‌ದಾರರ ಸಹಿ ಮತ್ತು ಸೀಲು

* ಮೇಲ್ಕಂಡ ಕ್ರಮ ಸಂಖ್ಯೆ: 2, 3, 4, 6, 7, 8, 9 ಮತ್ತು 10 ರ ದಾಖಲೆಗಳನ್ನು ನೋಟರಿಯವರಿಂದ ಪ್ರಮಾಣೀಕರಿಸಿ ಲಗತ್ತಿಸುವುದು.

ಅನುಬಂಧ - ' ಸಿ '

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,
ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222

---

## -: ಟೆಂಡರ್‌ಗೆ ಸಂಬಂಧಿಸಿದ ನಿಬಂಧನೆಗಳು :-

**(1) ಟೆಂಡರ್ ಸಲ್ಲಿಸುವ ವಿಧಾನ:-**

ಎ) ಟೆಕ್ನಿಕಲ್ ಟೆಂಡರ್ ಭಾಗ-1 ನ್ನು ಭರ್ತಿಮಾಡಿ ಅದರೊಂದಿಗೆ ಸಂಬಂಧಿಸಿದ ಅಗತ್ಯ ದಾಖಲೆಗಳನ್ನು ಇ-ಟೆಂಡರ್ ಮೂಲಕ ಸಲ್ಲಿಸುವುದು.

ಬಿ) ಕಮರ್ಷಿಯಲ್ ಟೆಂಡರ್ ಭಾಗ-2 ಅನ್ನು ಇ-ಟೆಂಡರ್ ಮೂಲಕ ಭರ್ತಿ ಮಾಡಿ ಸಲ್ಲಿಸುವುದು.

**(2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:** ಇ- ಟೆಂಡರ್‌ನಲ್ಲಿದ್ದಂತೆ.

**(3) ಟೆಂಡರ್ ಸಲ್ಲಿಸಲು ಅರ್ಹತೆ:**

ಎ) ಸಂವೇದಕರ ನಿಧಿ (EMD), ಕಾರ್ಮಿಕರ ಭವಿಷ್ಯನಿಧಿ (EPF), ನೌಕರರ ರಾಜ್ಯ ವಿಮಾ (ESI) ಕೋಡ್ ನಂಬರ್, ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಪ್ರಕಾರ ಪಡೆದ ಪ್ರಮಾಣ ಪತ್ರ(ಫಾರಂ-ಸಿ), ಸರಕು ಮತ್ತು ಸೇವಾ ತೆರಿಗೆ(GST), ಪ್ರೊಫೆಷನಲ್ ಟ್ಯಾಕ್ಸ್ ಮತ್ತು ಇನ್‌ಕಂಟ್ಯಾಕ್ಸ್ ನೊಂದಾವಣಿ ಪ್ರಮಾಣ ಪತ್ರಗಳನ್ನು ಹಾಗೂ ಪಾನ್ ಕಾರ್ಡ್ ಹೊಂದಿರಬೇಕು.

ಬಿ) A, B ಮತ್ತು C ತುಂಡು ಗುತ್ತಿಗೆ ಕೆಲಸ ನಿರ್ವಹಿಸಿದ ಬಗ್ಗೆ ಕಾಂಟ್ರಾಕ್ಟ್ ಲೇಬರ್ ಲೈಸೆನ್ಸ್ (ಫಾರಂ-6) ಹೊಂದಿದವರಾಗಿರಬೇಕು.

ಸಿ) ಒಕ್ಕೂಟದಲ್ಲಿ ಹಾಲಿ ಭದ್ರತಾ ಗುತ್ತಿಗೆ ಕೆಲಸವನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಸದರಿ ಕಾರ್ಮಿಕ ಗುತ್ತಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

ಡಿ) ಒಕ್ಕೂಟದಲ್ಲಿ ಕಾರ್ಮಿಕ ಗುತ್ತಿಗೆ ಕೆಲಸ / ಭದ್ರತಾ ಗುತ್ತಿಗೆ ಅಥವಾ ಒಕ್ಕೂಟದ ಇನ್ನಿತರೆ ಯಾವುದೇ ಗುತ್ತಿಗೆ ಕೆಲಸಗಳನ್ನು ಗುತ್ತಿಗೆ ಅವಧಿ / ನಿಯಮಾನುಸಾರ ವಿಸ್ತರಿಸಿದ ಅವಧಿ ಮುಗಿಯುವುದರ ಒಳಗಾಗಿ ಅವರ ಕೆಲಸ ಅಸಮರ್ಪಕವೆಂದು ಅವರ ಗುತ್ತಿಗೆಯನ್ನು ಈ ಹಿಂದೆ ಒಕ್ಕೂಟವು ರದ್ದುಪಡಿಸಿದ್ದಲ್ಲಿ ಅಂತಹ ಗುತ್ತಿಗೆದಾರರು ಅವರ ಗುತ್ತಿಗೆ ರದ್ದುಪಡಿಸಿದ ಆದೇಶದಿಂದ5 ವರ್ಷಗಳ ಅವಧಿ ಪೂರ್ತಿ ಆಗದೇ ಇದ್ದಲ್ಲಿ ಅವರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಿರುವುದಿಲ್ಲ.

ಇ) ಈ ಹಿಂದೆ ಒಕ್ಕೂಟದಲ್ಲಿ ಗುತ್ತಿಗೆದಾರರು ಯಾವುದೇ ಗುತ್ತಿಗೆ ಸೇವೆ ಸಲ್ಲಿಸಿದ್ದು ಆಗ ಅವರ ಸೇವೆಯು ತೃಪ್ತಿಕರವಾಗಿಲ್ಲವೆಂದು ಪರಿಗಣಿಸಲ್ಪಟ್ಟಿದ್ದಲ್ಲಿ ಅಥವಾ ಅವರನ್ನು ಕಪ್ಪುಪಟ್ಟಿಯಲ್ಲಿ ಇರಿಸಿದ್ದಲ್ಲಿ ಅಂತಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ. ಇದರ ಬಗ್ಗೆ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಎಫ್) ಈ ಹಿಂದೆ ಒಕ್ಕೂಟದಲ್ಲಿ ಯಾವುದೇ ಕೆಲಸಗಳಿಗಾಗಿ ಟೆಂಡರ್ ಒಪ್ಪಿಗೆಯ ಆದೇಶ ಪಡೆದ ನಂತರ ನಿಗದಿತ ಕಾಲದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲು ಹಾಗೂ ಭದ್ರತಾ ಠೇವಣಿಯನ್ನು ನೀಡಲು ವಿಫಲರಾಗಿ ಸಂವೇದಕರ ನಿಧಿಯನ್ನು ಒಕ್ಕೂಟವು ಮುಟ್ಟುಗೋಲು ಹಾಕಿಕೊಂಡಂತಹ ಗುತ್ತಿಗೆದಾರರು ಅದರ ಮುಂದಿನ 5 ವರ್ಷಗಳ ಅವಧಿಗೆ ಒಕ್ಕೂಟದ ಯಾವುದೇ ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಅರ್ಹರಿರುವುದಿಲ್ಲ.

**(4) ಗುತ್ತಿಗೆಯ ಅವಧಿ:**

**ಗುತ್ತಿಗೆಯು ಎರಡು ವರ್ಷಗಳ ಅವಧಿಯಾಗಿದ್ದು, ಗುತ್ತಿಗೆ ಅವಧಿ ಮುಗಿದ ಮೇಲೆ ಸದರಿ ಗುತ್ತಿಗೆಯನ್ನು3 ತಿಂಗಳವರೆಗೆ ಅದೇ ದರ ಹಾಗೂ ಅದೇ ನಿಬಂಧನೆಗಳಲ್ಲಿ ಮುಂದುವರೆಸುವ ಅಧಿಕಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ಕಾಯ್ದಿರಿಸಿಕೊಂಡಿರುತ್ತದೆ. ಗುತ್ತಿಗೆದಾರರ ಸೇವೆಯು ಸಮರ್ಪಕವಾಗಿಲ್ಲದಿದ್ದಲ್ಲಿ ಅವರ ಗುತ್ತಿಗೆಯನ್ನು ಒಕ್ಕೂಟವು ಯಾವುದೇ ಸಂದರ್ಭದಲ್ಲಿ ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ.**

**(5) ಟೆಂಡರ್‌ಗಳನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕು :**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟವು ಯಾವುದೇ ಟೆಂಡರ್ ಅಥವಾ ಎಲ್ಲಾ ಟೆಂಡರ್‌ಗಳನ್ನು ಕಚೇರಿ ಕೆಲಸದ ಆದೇಶ ನೀಡುವ ಮೊದಲು ಯಾವುದೇ ಕಾರಣಗಳನ್ನು ನೀಡದೇ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿರುತ್ತದೆ. ಇದಕ್ಕೆ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.**

**(6) ಸಂವೇದಕರ ನಿಧಿ (EMD):**

**ಎ) ಕಡಿಮೆ ದರ ನಮೂದಿಸಿದ ಗುತ್ತಿಗೆದಾರರ ಸಂವೇದಕರ ನಿಧಿಯನ್ನು 90 ದಿನ ಅಥವಾ ಟೆಂಡರ್ ಇತ್ಯರ್ಥವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹಿಂದಿರುಗಿಸಲಾಗುವುದಿಲ್ಲ.**

**ಬಿ) ಟೆಂಡರ್ ಒಪ್ಪಿಗೆಯ ಆದೇಶ ನೀಡಿದ ನಂತರ ಗುತ್ತಿಗೆದಾರರು ನಿಗದಿತ ಕಾಲದಲ್ಲಿ ಕರಾರು ಒಪ್ಪಂದ ಮಾಡಿಕೊಳ್ಳಲು ಹಾಗೂ ಭದ್ರತಾ ಠೇವಣಿಯನ್ನು ನೀಡಲು ವಿಫಲರಾದಲ್ಲಿ ಸಂವೇದಕರ ನಿಧಿಯನ್ನು ಒಕ್ಕೂಟವು ಮುಟ್ಟುಗೋಲು ಹಾಕಿಕೊಳ್ಳುವುದು. ಈ ರೀತಿ ಸಂವೇದಕರ ನಿಧಿ ಮುಟ್ಟುಗೋಲು ಹಾಕಿಕೊಂಡ ಗುತ್ತಿಗೆದಾರರು ಮುಂದಿನ 5 ವರ್ಷಗಳ ಅವಧಿಗೆ ಒಕ್ಕೂಟದ ಯಾವುದೇ ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಅರ್ಹರಿರುವುದಿಲ್ಲ.**

**(7) ಭದ್ರತಾ ಠೇವಣಿ (ಸೆಕ್ಯೂರಿಟಿ ಡಿಪಾಜಿಟ್):-**

**ಗುತ್ತಿಗೆಯ ಒಪ್ಪಿಗೆ ಆದೇಶ ಪಡೆದ 8 ದಿನಗಳೊಳಗಾಗಿ ಗುತ್ತಿಗೆದಾರರು, ಕಾರ್ಯ ನಿರ್ವಹಣಾ ಭದ್ರತೆಗಾಗಿ ಈ ಕೆಳಕಂಡಂತೆ ವರ್ಗೀಕರಿಸಲಾದ ತುಂಡು ಗುತ್ತಿಗೆ ಕೆಲಸಗಳಿಗೆ ನಮೂದಿಸಿದ ಮೊಬಲಗನ್ನು ಸೆಕ್ಯೂರಿಟಿ ಡಿಪಾಸಿಟ್ ಆಗಿ ನಗದು / ಡಿ.ಡಿ /ಎಫ್.ಡಿ/ ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಒಕ್ಕೂಟದಲ್ಲಿ ಇಡತಕ್ಕದ್ದು. ಇದಕ್ಕೆ ಬಡ್ಡಿ ನೀಡಲಾಗುವುದಿಲ್ಲ.**

| ಕ್ರಮ ಸಂಖ್ಯೆ | ತುಂಡು ಗುತ್ತಿಗೆ ಕೆಲಸದ ವಿವರ | ನಿಗದಿತ ಭದ್ರತಾ ಠೇವಣಿ ಮೊತ್ತ |
|---|---|---|
| **A)** | **ಶಿವಮೊಗ್ಗ ಡೇರಿ ಮತ್ತು ದಾವಣಗೆರೆ ಡೇರಿಗಳಲ್ಲಿ ಉಪಹಾರ ಗೃಹದ ನಿರ್ವಹಣೆ, ಅಡುಗೆ ಮತ್ತು ಊಟ, ಉಪಹಾರ ತಯಾರಿಕೆ ಮತ್ತು ವಿತರಣೆ** | **2,96,000/-** |
| **B)** | **ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಮೇವಿನ ತಾಕುಗಳು, ಗಾರ್ಡನ್ ಹಾಗೂ ಔಷಧಿ ಸಸ್ಯಗಳ ತಾಕುಗಳ ಕೆಲಸಗಳ ನಿರ್ವಹಣೆ.** | **1,42,000/-** |
| **C)** | **ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ತಡಗಣಿ ಹಾಗೂ ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆ.** | **6,24,000/-** |

**(8)** ಭದ್ರತಾ ಠೇವಣಿಯ ಮೊತ್ತವನ್ನು (ಸೆಕ್ಯೂರಿಟಿ ಡಿಪಾಸಿಟ್) ಈ ಕೆಳಗಿನ ಸಂದರ್ಭದಲ್ಲಿ ಪೂರ್ಣ ಅಥವಾ ಭಾಗಶಃ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಅ) ತಿಳಿಸಿದ ಕೆಲಸಗಳನ್ನು ನಿರ್ವಹಿಸದಿದ್ದಾಗ ಅಥವಾ ಗುತ್ತಿಗೆಯ ನಿಬಂಧನೆಗಳ ಉಲ್ಲಂಘನೆಗಾಗಿ ಗುತ್ತಿಗೆಯನ್ನು ರದ್ದುಪಡಿಸಿದ ಸಂದರ್ಭದಲ್ಲಿ,

ಆ) ಗುತ್ತಿಗೆಯನ್ನು ನಿರ್ವಹಿಸದೇ ಇದ್ದುದಕ್ಕಾಗಿ ಒಕ್ಕೂಟಕ್ಕೆ ಉಂಟಾಗಬಹುದಾದ ಯಾವುದೇ ನಷ್ಟಕ್ಕೆ,

ಇ) ಗುತ್ತಿಗೆದಾರರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಕೆಲಸಗಾರರು ಕಾರ್ಯ ನಿರ್ವಹಣೆಯ ಸಂದರ್ಭದಲ್ಲಿ ಒಕ್ಕೂಟದ ಆಸ್ತಿಗೆ ಹಾನಿ ಉಂಟು ಮಾಡಿದಲ್ಲಿ,

ಈ) ಗುತ್ತಿಗೆದಾರನು ನಿಗದಿಪಡಿಸಿದ ತುಂಡು ಗುತ್ತಿಗೆ ಕೆಲಸಗಳಿಗೆ ನಿಗದಿತ ಸಂಖ್ಯೆಯಲ್ಲಿ ಕಾರ್ಮಿಕರನ್ನು ಒದಗಿಸಲು ವಿಫಲವಾದಾಗ ಕಡಿಮೆ ಕಾರ್ಮಿಕರಿಗೆ ಅನುಗುಣವಾಗಿ ಗುತ್ತಿಗೆದಾರರಿಗೆ ದಂಡ ಹಾಕಲಾಗುವುದು ಮತ್ತು ಅಂತಹ ಸಂದರ್ಭದಲ್ಲಿ ಬೇರೆಯವರಿಂದ ಕೆಲಸ ನಿರ್ವಹಿಸಿದಾಗ, ಖರ್ಚಾದ ಮೊತ್ತವನ್ನು ದಂಡದ ಮೊತ್ತದೊಂದಿಗೆ ವಸೂಲಿ ಮಾಡಲಾಗುವುದು.

ಉ) ಒಕ್ಕೂಟಕ್ಕೆ ಹಾನಿಯುಂಟು ಮಾಡಿದಾಗ, ಸೋರುವಿಕೆಯಾದಾಗ, ಹಾಳಾದ ಕೆಲಸಗಳಿಗಾಗಿ ಅಥವಾ ಇನ್ನಾವುದೇ ಕಾರಣಗಳಿಗಾಗಿ ವ್ಯವಸ್ಥಾಪಕ ನಿರ್ದೇಶಕರು ವಿಧಿಸಿದ ದಂಡಗಳನ್ನು ಸಂದಾಯ ಮಾಡದೇ ಇರುವಂತಹ ಮೊತ್ತವನ್ನು,

ಊ) ಕಾರ್ಮಿಕರಿಗೆ ಸಂಬಂಧಿಸಿದಂತೆ ಭವಿಷ್ಯನಿಧಿ, ಇ.ಎಸ್.ಐ., ಮುಂತಾದ ಶಾಸನಬದ್ಧ ಪಾವತಿಗಳನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಪಾವತಿಸದಿದ್ದಲ್ಲಿ ಅಂತಹ ಮೊಬಲಗನ್ನು ಮತ್ತು ಅಂತಹ ಸಂಸ್ಥೆಗಳು ಕಾರ್ಮಿಕ ಗುತ್ತಿಗೆಗೆ ಸಂಬಂಧಿಸಿದಂತೆ ವಿಧಿಸುವ ಯಾವುದೇ ದಂಡದ ಮೊತ್ತವನ್ನು,

ಋ) ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

ಎ) ಗುತ್ತಿಗೆದಾರರು ಕಾನೂನುಬದ್ಧವಾಗಿ ಸಲ್ಲಿಸಬೇಕಾದ ರಿಟರ್ನ್ಸ್‌ಗಳನ್ನು ಹಾಗೂ ದಾಖಲೆಗಳನ್ನು ಪಿ.ಎಫ್., ಇ.ಎಸ್.ಐ. ಮತ್ತು ಸರಕು ಮತ್ತು ಸೇವಾ ತೆರಿಗೆ (GST) ಇಲಾಖೆಗಳಿಂದ ಪರಿವೀಕ್ಷಣೆಗೆ ಒಳಪಡಿಸಿ ಅದರ ದಾಖಲೆಗಳನ್ನು ಎರಡು ವರ್ಷದ ಅವಧಿ ಮುಗಿದ 01 ತಿಂಗಳೊಳಗಾಗಿ ಅಥವಾ ಗುತ್ತಿಗೆ ಅವಧಿ ಮುಗಿದ ಒಂದು ತಿಂಗಳ ಅವಧಿ ಒಳಗಾಗಿ ಸಲ್ಲಿಸಬೇಕು. ಅವುಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿ ಅದರ ದೃಢೀಕೃತ ಮತ್ತು ಪರಿವೀಕ್ಷಣಾ ಪ್ರತಿಗಳನ್ನು ಒಕ್ಕೂಟಕ್ಕೆ ಸಲ್ಲಿಸಿದ ನಂತರವೇ ಭದ್ರತಾ ಠೇವಣಿಯನ್ನು ವಾಪಸ್ಸು ಮಾಡಲಾಗುವುದು.

**(9)** <u>ಕೆಲಸದ ಅವಧಿ:</u>

ಈ ಕೆಳಕಂಡಂತೆ ಪಾಳಿಯಲ್ಲಿ ಗುತ್ತಿಗೆ ಕಾರ್ಮಿಕರನ್ನು ಒದಗಿಸಬೇಕಾಗಿರುತ್ತದೆ. ಅಗತ್ಯವಾದಾಗ ಪಾಳಿಯ ವೇಳೆ ಬದಲಾಗಬಹುದು.

ಎ) ಸಾಮಾನ್ಯ ಪಾಳಿ ಬೆಳಗ್ಗೆ 9.30 ರಿಂದ ಸಂಜೆ 5.30 ಗಂಟೆಯವರೆಗೆ

ಬಿ) ಒಂದನೇ ಪಾಳಿ ಬೆಳಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆಯವರೆಗೆ

ಸಿ) 2 ನೇ ಪಾಳಿ ಮಧ್ಯಾಹ್ನ 2 ರಿಂದ ರಾತ್ರಿ 10 ಗಂಟೆಯವರೆಗೆ

ಡಿ) 3 ನೇ ಪಾಳಿ ರಾತ್ರಿ 10 ರಿಂದ ಬೆಳಗ್ಗೆ 6 ಗಂಟೆಯವರೆಗೆ

ಇ) ಡೇರಿಗಳಲ್ಲಿ ಕೆಲಸಗಳನ್ನು "ಸ್ಪ್ಲಿಟ್ ಹವರ್" ನಲ್ಲಿ ಕಾಯನಿರ್ವಹಿಸಬೇಕಾಗಬಹುದಾಗಿರುತ್ತದೆ.

ಎಫ್) ಪಾಳಿಯ ವೇಳೆಯು ಒಕ್ಕೂಟದ ವಿಭಾಗಗಳಿಗೆ ಸಂಬಂದಿಸಿದಂತೆ ಬದಲಾವಣೆಗೆ ಒಳಪಟ್ಟಿರುತ್ತದೆ.

ಜಿ) ದಿನಕ್ಕೆ 08 ತಾಸು ಮಾತ್ರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸುವುದು.

ಹೆಚ್) ಮಹಿಳಾ ಕಾರ್ಮಿಕರನ್ನು ರಾತ್ರಿ ಪಾಳಿಯ ಕೆಲಸಗಳಿಗೆ ನಿಯೋಜಿಸಕೂಡದು.

**(10)** ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸತಕ್ಕದ್ದಲ್ಲ. ಒಂದು ವೇಳೆ ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸಿದ್ದಲ್ಲಿ ಸಂಭಾವನೆಯನ್ನು ಅನುಪಾತದಲ್ಲಿ ಕಠಾವಣೆ ಮಾಡಲಾಗುವುದು ಹಾಗೂ ದಂಡ ವಿಧಿಸಲಾಗುವುದು ಮತ್ತು ಅದಕ್ಕೆ ಒಕ್ಕೂಟ ಪರ್ಯಾಯ ವ್ಯವಸ್ಥೆ ಮಾಡಿದಲ್ಲಿ ಅದರ ಹೆಚ್ಚುವರಿ ಮೊಬಲಗಿಗೆ ಗುತ್ತಿಗೆದಾರರೇ ಜವಾಬ್ದಾರರಾಗಿರುತ್ತಾರೆ.

**(11)** ಗುತ್ತಿಗೆದಾರರು ಗುತ್ತಿಗೆಯನ್ನು ಬೇರೆಯವರಿಗೆ ವರ್ಗಾಯಿಸುವಂತಿಲ್ಲ. ಸಬ್‌ಲೆಟ್ ಮಾಡಲು ಅವಕಾಶ ಇರುವುದಿಲ್ಲ.

**(12)** ಗುತ್ತಿಗೆದಾರ ಅಥವಾ ಅವರ ಪ್ರತಿನಿಧಿ ಸದಾ ಕೆಲಸದ ಸ್ಥಳದಲ್ಲಿದ್ದು, ಆಯಾ ವಿಭಾಗದ ಅಧಿಕಾರಿಯ ನಿರ್ದೇಶನದ ಮೇರೆಗೆ ಕಾರ್ಮಿಕರಿಂದ ಕೆಲಸ ನಿರ್ವಹಿಸಬೇಕು.

**(13)** ಗುತ್ತಿಗೆದಾರನು ತನ್ನ ಕೆಲಸದ ನಿರ್ವಹಣೆ ಮಾಡಲು ವಿಫಲವಾದಲ್ಲಿ ಮತ್ತು ಒಕ್ಕೂಟದ ಕೆಲಸಗಳಿಗೆ ಧಕ್ಕೆ ಉಂಟು ಮಾಡಿದಲ್ಲಿ ಒಕ್ಕೂಟದ ಹಿತದೃಷ್ಟಿಯಿಂದ ಅವಶ್ಯ ಕಂಡು ಬಂದಲ್ಲಿ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಪೂರ್ವದಲ್ಲಿ ಒಪ್ಪಂದವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಥವಾ ನಿಗದಿತ ದಿನಾಂಕದಿಂದ ಜಾರಿಗೆ ಬರುವಂತೆ ಯಾವುದೇ ಪೂರ್ವಭಾವಿ ನೋಟೀಸನ್ನು ಗುತ್ತಿಗೆದಾರರಿಗೆ ನೀಡದೆ ಗುತ್ತಿಗೆಯನ್ನು ರದ್ದುಪಡಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ ಮತ್ತು ಈ ರೀತಿಯ ಸಂದರ್ಭದಲ್ಲಿ ಗುತ್ತಿಗೆದಾರರು ಯಾವುದೇ ನಷ್ಟವನ್ನು / ಪರಿಹಾರವನ್ನು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದಿಂದ ಕೇಳುವಂತಿಲ್ಲ.

**(14)** ಗುತ್ತಿಗೆ ಕೆಲಸದ ರೀತಿ ಮತ್ತು ಸಂಭವನೀಯ ದುಷ್ಪರಿಣಾಮಗಳಿಗನುಗುಣವಾಗಿ ರಕ್ಷಣಾ ಸಲಕರಣೆಗಳನ್ನು ಗುತ್ತಿಗೆದಾರನು ತಮ್ಮ ಕೆಲಸಗಾರರಿಗೆ ತನ್ನ ಸ್ವಂತ ವೆಚ್ಚದಲ್ಲಿ ಒದಗಿಸತಕ್ಕದ್ದು.

**(15)** <u>ಅನ್ವಯಿಸುವ ಕಾಯ್ದೆಗಳು:</u>

ಕಾರ್ಮಿಕ ಗುತ್ತಿಗೆದಾರರು ಈ ಕೆಳಕಂಡ ಕಾಯ್ದೆಗಳ ಹಾಗೂ ಕಾಲಕಾಲಕ್ಕೆ ಜಾರಿಯಲ್ಲಿರುವ ತಿದ್ದುಪಡಿ ಕಾಯ್ದೆಗಳ ಅನುಸಾರ ನಡೆದುಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

ಅ) ಕಾಂಟ್ರಾಕ್ಟ್ ಲೇಬರ್ (ರೆಗ್ಯೂಲೇಶನ್ ಅಂಡ್ ಅಬಾಲಿಷನ್ ಆಕ್ಟ್ )

ಆ) ಪೇಮೆಂಟ್ ಆಫ್ ವೇಜಸ್ ಆಕ್ಟ್

ಇ) ಇ.ಪಿ.ಎಫ್. ಅಂಡ್ ಎಫ್.ಪಿ.ಎಫ್. ಆಕ್ಟ್

ಈ) ವರ್ಕ್‌ಮನ್ ಕಾಂಪನ್‌ಷೇಷನ್ ಆಕ್ಟ್

ಉ) ಇನ್‌ಕಮ್ ಟ್ಯಾಕ್ಸ್ ಆಕ್ಟ್

ಊ) ಇ.ಎಸ್.ಐ. ಆಕ್ಟ್

ಋ) ಪ್ರೊಫೆಷನಲ್ ಟ್ಯಾಕ್ಸ್ ಆಕ್ಟ್

ೠ) ಸರಕು ಮತ್ತು ಸೇವಾ ತೆರಿಗೆ (GST) ಆಕ್ಟ್

ಎ) ಬೋನಸ್ ಆಕ್ಟ್

ಏ) ಗ್ರ್ಯಾಚ್ಯೂಯಿಟಿ ಆಕ್ಟ್

ಐ) ಮತ್ತು ಕಾಲಕಾಲಕ್ಕೆ ಜಾರಿಯಲ್ಲಿರುವ ಹಾಗೂ ಕಾರ್ಮಿಕ ಗುತ್ತಿಗೆಗೆ ಅನ್ವಯಿಸುವ ಸರ್ಕಾರದ ಇತರೆ ಯಾವುದೇ ಕಾನೂನುಗಳು / ನಿಬಂಧನೆಗಳು.

ಒ) ಈ ಬಗ್ಗೆ ಕಾಲಕಾಲಕ್ಕೆ ನ್ಯಾಯಾಲಯಗಳು ನೀಡುವ ಆದೇಶಗಳನ್ನು ಪಾಲಿಸುವುದು.

**(16)** 18 ವರ್ಷ ವಯೋಮಿತಿಯೊಳಗಿನ ಮತ್ತು ಗರಿಷ್ಟ 40 ವರ್ಷ ಮೇಲ್ಪಟ್ಟ ವಯೋಮಿತಿಯ ಕೆಲಸಗಾರರನ್ನು ನೇಮಿಸಿಕೊಳ್ಳಕೂಡದು.

**(17)** ಕೆಲಸಗಾರರಿಗೆ ನೇಮಕಾತಿ ಆದೇಶ ಹಾಗೂ ಗುರುತಿನ ಚೀಟಿಯನ್ನು ನೀಡುವುದು, ಕೆಲಸಗಾರರ ನೇಮಕಾತಿ ಆದೇಶ ಪ್ರತಿಯನ್ನು ಒಕ್ಕೂಟಕ್ಕೆ ನೀಡುವುದು.

**(18)** ಕೆಲಸಗಾರರಿಗೆ ಕೆಲಸದ ಸಮಯದಲ್ಲಿ ಯಾವುದೇ ಕಾರಣದಿಂದಾಗಿ ಉಂಟಾದ ತಾತ್ಕಾಲಿಕ / ಖಾಯಂ ಊನಗಳು ಅಥವಾ ಸಾವು ಉಂಟಾದಲ್ಲಿ ಅದಕ್ಕೆ ಕಾನೂನಿನ ರೀತ್ಯ ತತ್ಸಂಬಂಧ ಯಾವುದೇ ಪರಿಹಾರವನ್ನು ನೀಡುವುದು ಗುತ್ತಿಗೆದಾರರ ಜವಾಬ್ದಾರಿ ಆಗಿರುತ್ತದೆ.

**(19)** ಶಾಸನಬದ್ಧ ನಿಬಂಧನೆಗಳಿಗನುಸಾರವಾಗಿ ಗುತ್ತಿಗೆದಾರನು ಕೆಲಸ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

**(20)** ಗುತ್ತಿಗೆಯನ್ನು ಯಾವುದೇ ಸಂದರ್ಭದಲ್ಲಿ ಬೇರೆಯವರಿಗೆ ವರ್ಗಾಯಿಸುವಂತೆ ಸಲ್ಲಿಸುವ ಯಾವುದೇ ಮನವಿಯನ್ನು ಸದರಿ ಗುತ್ತಿಗೆದಾರರು ಕಾರ್ಯ ನಿರ್ವಹಿಸಲು ಅಸಮರ್ಥರೆಂದು ಪರಿಗಣಿಸಲಾಗುವುದು. ಗುತ್ತಿಗೆಯ ನಿಬಂಧನೆಗಳನ್ನು ಮುರಿದಿದ್ದಾರೆಂದು ಪರಿಗಣಿಸಿ, ಗುತ್ತಿಗೆಯನ್ನು ರದ್ದುಗೊಳಿಸಲಾಗುವುದಲ್ಲದೇ ಅವರ ಠೇವಣಿಯೊಂದಿಗೆ ಅವರಿಂದ ಬಾಕಿ ಇರಬಹುದಾದ ಇನ್ನಾವುದೇ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**(21)** <u>ವಿವಾದಗಳು</u>:–

ಎ) ಯಾವುದೇ ಕೆಲಸ ಕಾರ್ಯಗಳ ತೃಪ್ತಿಕರ ನಿರ್ವಹಣೆಗೆ ಸಂಬಂಧಿಸಿದಂತೆ ಮತ್ತು ನಿಬಂಧನೆಗಳ ಪಾಲನೆಗೆ ಸಂಬಂಧಿಸಿದಂತೆ ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ ರವರ ತೀರ್ಮಾನವೇ ಅಂತಿಮವಾದದ್ದು ಮತ್ತು ನಿಲ್ಲುವಂತದ್ದು.

ಬಿ) ಈ ಗುತ್ತಿಗೆದಾರಿಕೆಯಿಂದ ಉದ್ಭವಿಸುವ ಯಾವುದೇ ವ್ಯಾಜ್ಯಗಳು ಮಧ್ಯಸ್ಥದಾರರ ಮುಖಾಂತರ ಬಗೆಹರಿಸಿಕೊಳ್ಳತಕ್ಕದ್ದು. ಮಧ್ಯಸ್ಥದಾರರನ್ನು ವ್ಯವಸ್ಥಾಪಕ ನಿರ್ದೇಶಕರು ನೇಮಕ ಮಾಡುವರು. ವ್ಯಾಜ್ಯಗಳು ಅಲ್ಲಿಯೂ ಬಗೆಹರಿಯದ ಪಕ್ಷದಲ್ಲಿ ನೀವು ಒಕ್ಕೂಟದಲ್ಲಿ ನಾಮಮಾತ್ರ ಸದಸ್ಯರಾಗಿರುವುದರಿಂದ ಸಹಕಾರ ಸಂಘಗಳ ನ್ಯಾಯಾಲಯದಲ್ಲಿ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವುದು. ವ್ಯಾಜ್ಯಗಳು ಅಲ್ಲಿಯೂ ಬಗೆಹರಿಯದ ಪಕ್ಷದಲ್ಲಿ ನ್ಯಾಯಾಲಯದ ಮೊರೆ ಹೋಗಬಹುದಾಗಿದ್ದು, ಆದಾಗ್ಯೂ ಈ ವಿವಾದಗಳು ಶಿವಮೊಗ್ಗ ನಗರದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ.

**(22)** ಗುತ್ತಿಗೆದಾರನು ಟೆಂಡರಿನಲ್ಲಿ ನೀಡಿದ ವಿಳಾಸಕ್ಕೆ ದೃಢೀಕೃತ ಅಂಚೆ/ಕೋರಿಯರ್ಸ್ ಮೂಲಕ ಕಳುಹಿಸಿರುವ ಕಾಗದಗಳು ತಲುಪದೇ ಇದ್ದಲ್ಲಿ ಅದಕ್ಕೆ ಒಕ್ಕೂಟವು ಜವಾಬ್ದಾರಿ ಹೊಂದಿರುವುದಿಲ್ಲ. ಕಾಗದ ಪತ್ರಗಳು ಮೇಲ್ಕಂಡಂತೆ ಒಕ್ಕೂಟದಿಂದ ರವಾನೆಯಾದ ನಂತರ ಎಲ್ಲಾ ತಿಳುವಳಿಕೆಗಳು ಕಾಂಟ್ರಾಕ್ಟ್‌ದಾರನಿಂದ ಪಡೆಯಲ್ಪಟ್ಟಿದೆ ಎಂದು ತೀರ್ಮಾನಿಸಲಾಗುವುದು.

**(23) <u>ಹಣ ಪಾವತಿ / ಬಿಲ್ ಪಾವತಿ:</u>**

ಎ) ಗುತ್ತಿಗೆದಾರನು ಕಾರ್ಮಿಕರನ್ನು ಒದಗಿಸಿದ್ದಕ್ಕೆ ಅನುಗುಣವಾಗಿ ತಿಂಗಳಿಗೊಂದು ಬಾರಿ ಬಿಲ್‌ಗಳನ್ನು ಹಾಗೂ ಕಾರ್ಮಿಕರ ಹಾಜರಾತಿಗಳನ್ನು ದ್ವಿಪ್ರತಿಯಲ್ಲಿ ತಯಾರಿಸಿ ಗುತ್ತಿಗೆದಾರರು ಕಾರ್ಮಿಕರನ್ನು ಒದಗಿಸಿದ ಬಗ್ಗೆ ಹಾಗೂ ಅವರು ಸಮರ್ಪಕವಾಗಿ ಕಾರ್ಯ ನಿರ್ವಹಿಸಿದ ಬಗ್ಗೆ ಸಂಬಂಧಪಟ್ಟ ವಿಭಾಗಾಧಿಕಾರಿಗಳಿಂದ ದೃಢೀಕರಣ ಪಡೆದು ಆಯಾ ತಿಂಗಳ03 ನೇ ತಾರೀಖಿನೊಳಗಾಗಿ ಬಿಲ್‌ಗಳನ್ನು ಕಚೇರಿಗೆ ಹಣ ಪಾವತಿಗೆ ಸಲ್ಲಿಸತಕ್ಕದ್ದು. ನಂತರ 07 ದಿನಗಳೊಳಗಾಗಿ ಕಚೇರಿಯಿಂದ ಹಣ ಪಾವತಿಸಲಾಗುವುದು. ಗುತ್ತಿಗೆದಾರರು ಕಾರ್ಮಿಕರಿಗೆ ಬ್ಯಾಂಕ್ ಮುಖಾಂತರ ವೇಜ್ ಪಾವತಿಸತಕ್ಕದ್ದು. ಕಾರ್ಮಿಕರಿಗೆ ವೇಜ್ ಪಾವತಿಸಿರುವುದಕ್ಕೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್‌ಮೆಂಟ್ ಅನ್ನು ಮುಂದಿನ ತಿಂಗಳ ಗುತ್ತಿಗೆ ಬಿಲ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

ಬಿ) ಪ್ರತಿ ತಿಂಗಳು ಕಾರ್ಮಿಕರಿಗೆ ಭವಿಷ್ಯ ನಿಧಿ, ಇ.ಎಸ್.ಐ., ಜಿ.ಹೆಚ್, ಬೋನಸ್ ಮತ್ತು ಇ.ಎಲ್ ಅನ್ನು ಗುತ್ತಿಗೆದಾರರು ಪಾವತಿಸಿದ ದಾಖಲೆಗಳ ದೃಢೀಕೃತ ಪ್ರತಿಗಳನ್ನು ದೃಢೀಕೃತ ಶೆಡ್ಯೂಲ್‌ನೊಂದಿಗೆ ಒಕ್ಕೂಟಕ್ಕೆ ಮುಂದಿನ ತಿಂಗಳ ಬಿಲ್ಲಿನೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಸಿ) ಗುತ್ತಿಗೆದಾರರು ಪ್ರತಿ ತಿಂಗಳು ಬಿಲ್‌ನೊ0ದಿಗೆ ಸಲ್ಲಿಸುವ ಸರಕು ಮತ್ತು ಸೇವಾ ತೆರಿಗೆ (GST) ಅನ್ನು ನಿಗದಿತ ಸಮಯದೊಳಗೆ ಸಂಬಂಧಿಸಿದ ಇಲಾಖೆಗೆ ಪಾವತಿಸಿ ದೃಢೀಕೃತ ಚಲನ್ ಅನ್ನು ಮುಂದಿನ ತಿಂಗಳ ಬಿಲ್‌ನೊಂದಿಗೆ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸುವುದು

ಡಿ) ಗುತ್ತಿಗೆದಾರರು ಮಾಸಿಕ ಬಿಲ್ ಅವಧಿ ಮುಗಿದ ಕೂಡಲೇ ನಿಯಮಾವಳಿ ಪ್ರಕಾರ ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಇ.ಎಸ್.ಐ. ಮತ್ತು ಪಿ.ಎಫ್. ಮುಂತಾದ ಶಾಸನಬದ್ಧ ವಂತಿಕೆಗಳನ್ನು ಆಯಾ ಇಲಾಖೆಗಳಿಗೆ ತುಂಡು ಗುತ್ತಿಗೆಯ ಮಾಸಿಕ ಬಿಲ್ಲಿನ ಮೊತ್ತದ ಮೇಲೆ ಸಂಬಂಧಪಟ್ಟ ಇಲಾಖೆಗಳು ನಿಗದಿಪಡಿಸಿರುವ ಶೇಕಡವಾರು ಮೊತ್ತವನ್ನು ನಿಗದಿತ ಅವಧಿಯೊಳಗೆ ಪಾವತಿಸುವುದು. ತಪ್ಪಿದಲ್ಲಿ ಮುಂದಿನ ತಿಂಗಳ ಗುತ್ತಿಗೆದಾರರ ಬಿಲ್‌ನಲ್ಲಿ ಯಾವುದೇ ಮುನ್ಸೂಚನೆ ನೀಡದೆ ಮೇಲ್ಕಾಣಿಸಿದ ರೀತ್ಯಾ ಪಾವತಿಸಬೇಕಾದ ಒಟ್ಟು ಹಣವನ್ನು ಕಠಾವಣೆ ಮಾಡಿಕೊಂಡು ಪಿ.ಎಫ್. ಇ.ಎಸ್.ಐ. ಸಂಸ್ಥೆಗಳಿಗೆ ಒಕ್ಕೂಟದಿಂದಲೇ ಗುತ್ತಿಗೆದಾರರ ಸಂಬಂಧಿಸಿದ ಖಾತೆಗೆ ಜಮಾ ಮಾಡಲಾಗುವುದು. ಅಂತಹ ಸಂದರ್ಭದಲ್ಲಿ ದಂಡ ಹಾಗೂ ನಿರ್ವಹಣಾ ವೆಚ್ಚವನ್ನು ಗುತ್ತಿಗೆದಾರರ ಬಿಲ್‌ನಲ್ಲಿ / ಭದ್ರತಾ ಠೇವಣಿಯಲ್ಲಿ ಕಠಾವಣೆ ಮಾಡಿಕೊಳ್ಳುವ ಅಧಿಕಾರವನ್ನು ಒಕ್ಕೂಟ ಹೊಂದಿರುತ್ತದೆ.

ಇ) ಗುತ್ತಿಗೆದಾರರು ಆಯಾ ತಿಂಗಳುಗಳಲ್ಲಿ ಎಲ್ಲಾ ತುಂಡು ಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದಂತೆ ಇ.ಎಸ್.ಐ. ಮತ್ತು ಪಿ.ಎಫ್. ವಂತಿಗೆ ಪಾವತಿಸತಕ್ಕದ್ದು ತಪ್ಪಿದಲ್ಲಿ ಒಕ್ಕೂಟವು / ಇಲಾಖೆಯು ದಂಡ ವಿಧಿಸುವುದು ಸೇರಿದಂತೆ ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಗುತ್ತಿಗೆದಾರರು ಬದ್ಧರಾಗಿರುತ್ತಾರೆ.

ಎಫ್) ಗುತ್ತಿಗೆದಾರರು ಅಂತಿಮ ತಿಂಗಳ ಕಾರ್ಮಿಕರ ವೇತನವನ್ನು ವೇತನದ ಅವಧಿ ಮುಗಿದ10 ದಿನಗಳ ಒಳಗಾಗಿ ಕಾರ್ಮಿಕರಿಗೆ ಹಾಗೂ ಶಾಸನಬದ್ಧ ಪಾವತಿಗಳನ್ನು ಸಂಬಂಧಿಸಿದ ಇಲಾಖೆಗೆ ಪಾವತಿಸಿ, ಸದರಿ ದಾಖಲೆಗಳನ್ನು ಒಕ್ಕೂಟಕ್ಕೆ 15 ದಿನಗಳೊಳಗಾಗಿ ಒದಗಿಸುವುದು. ನಂತರ ಅಂತಿಮ ತಿಂಗಳ ಬಿಲ್ ಪಾವತಿಸಲು ಪರಿಗಣಿಸಲಾಗುವುದು. ಒಂದು ವೇಳೆ ಅವಧಿ ಮುಗಿದು15 ದಿನಗಳೊಳಗಾಗಿ ದಾಖಲಾತಿಗಳನ್ನು ಒದಗಿಸದಿದ್ದರೆ ಸದರಿ ಮೊತ್ತವನ್ನು ಒಕ್ಕೂಟದಿಂದ ಪಾವತಿಸಿ ಆ ಮೊಬಲಗನ್ನು ಗುತ್ತಿಗೆದಾರರ ಬಿಲ್‌ನಲ್ಲಿ / ಭದ್ರತಾ ಠೇವಣಿಯಲ್ಲಿ ಕಠಾವಣೆ ಮಾಡಿಕೊಳ್ಳಲಾಗುವುದು.

ಜಿ) ಗುತ್ತಿಗೆದಾರರಿಗೆ ಒಕ್ಕೂಟದಿಂದ ಹಣ ಪಾವತಿ ಮಾಡುವಾಗ ಸರ್ಕಾರಿ ಕಾಯಿದೆಗಳನ್ವಯ ತೆರಿಗೆ ಮತ್ತು ಇತರೆ ಬಾಬ್ತುಗಳನ್ನು ಕಠಾವಣೆ ಮಾಡಿ ಹಣ ಪಾವತಿ ಮಾಡಲಾಗುವುದು.

ಹೆಚ್) ಗುತ್ತಿಗೆದಾರರು ಟೆಂಡರ್ ದಾಖಲೆಗಳಲ್ಲಿ ಮತ್ತು ಗುತ್ತಿಗೆ ಕಾರ್ಮಿಕರ ಶಾಸನಬದ್ಧ ಪಾವತಿಗೆ ಸಂಬಂಧಿಸಿದಂತೆ ಒದಗಿಸಿದ ದಾಖಲೆಗಳಲ್ಲಿ ಹಾಗೂ ನಂತರ ಒಕ್ಕೂಟಕ್ಕೆ ಸಲ್ಲಿಸುವ ಯಾವುದೇ ದಾಖಲೆಗಳಲ್ಲಿ ತಪ್ಪು ಮಾಹಿತಿ ನೀಡಿದ್ದಲ್ಲಿ ಅದನ್ನು ತೀವ್ರವಾಗಿ ಪರಿಗಣಿಸಿ ದಂಡ ವಿಧಿಸಲಾಗುವುದು ಹಾಗೂ ಅವರನ್ನು ಕಪ್ಪು ಪಟ್ಟಿಗೆ ಸೇರಿಸುವುದೂ ಸೇರಿದಂತೆ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

**(24)** ಕೆಲಸದ ಅವಧಿಯಲ್ಲಿ ಗುತ್ತಿಗೆ ಕೆಲಸಗಾರರು ಎಲ್ಲಾ ಬಗೆಯ ಸುರಕ್ಷಣಾ ನಿಯಮಗಳನ್ನು ಪಾಲಿಸಿ, ಕೆಲಸ ಮಾಡುವಂತೆ ಸಂಬಂಧಪಟ್ಟ ಗುತ್ತಿಗೆದಾರರು ಎಚ್ಚರಿಕೆ ವಹಿಸಿ, ಕ್ರಮಕೈಗೊಳ್ಳಬೇಕು. ಗುತ್ತಿಗೆದಾರನ ಕೆಲಸಗಾರರು ಹಾಲಿ ಕೆಲಸದ ಮೇಲಿರುವಾಗ ಬೀಡಿ, ಸಿಗರೇಟು, ತಂಬಾಕು, ನಶ್ಯ, ಮದ್ಯಪಾನ ಹಾಗೂ ಇನ್ನಿತರೆ ಮಾದಕ ಮತ್ತು ನಿಷಿದ್ಧ ಪದಾರ್ಥಗಳ ಸೇವನೆ ಮಾಡಕೂಡದು. ವಿಶೇಷವಾಗಿ ವೈಯಕ್ತಿಕ ಶುಚಿತ್ವದ ಕಡೆ, ಹೇರ್‌ಕಟ್ ಮತ್ತು ನೇಲ್‌ಕಟ್‌ಗಳಿಗೆ ಗಮನ ನೀಡತಕ್ಕದ್ದು, ಅವನು ಆರೋಗ್ಯವಂತನಾಗಿದ್ದು, ಚರ್ಮ ಮುಂತಾದ ಯಾವುದೇ ಸಾಂಕ್ರಾಮಿಕ ಕಾಯಿಲೆಗಳಿಂದ ಮುಕ್ತನಾಗಿರತಕ್ಕದ್ದು. ಒಕ್ಕೂಟದ ನಿಯಮಗಳನ್ನು ಪಾಲಿಸತಕ್ಕದ್ದು ಹಾಗೂ ಶಾಂತಿಪಾಲನೆಗೆ ಭಂಗ ಉಂಟು ಮಾಡುವ ಯಾವುದೇ ಕೆಲಸವನ್ನು ಮಾಡಕೂಡದು.

**(25)** ಡೀಫ್ರೀಜ್‌ಗಳಲ್ಲಿ ಕೆಲಸ ಮಾಡುವ ಗುತ್ತಿಗೆದಾರ ಕಾರ್ಮಿಕರಿಗೆ ಗುತ್ತಿಗೆದಾರರು ತಮ್ಮ ಖರ್ಚಿನಲ್ಲಿ ಗಮ್ ಬೂಟ್‌ಗಳನ್ನು, ಉಲ್ಲನ್ ಕೋಟ್‌ಗಳನ್ನು ಹಾಗೂ ಕ್ಯಾಪ್‌ಗಳನ್ನು ಒದಗಿಸತಕ್ಕದ್ದು. ತಪ್ಪಿದಲ್ಲಿ ಅವುಗಳನ್ನು ಒಕ್ಕೂಟದಿಂದ ಒದಗಿಸಿ ಅದರ ಮೊಬಲಗನ್ನು ಗುತ್ತಿಗೆ ಬಿಲ್‌ನಲ್ಲಿ ಕಟಾಯಿಸಿಕೊಳ್ಳಲಾಗುವುದು.

**(26)** ಕಾರ್ಮಿಕ ಗುತ್ತಿಗೆದಾರನು ತನ್ನ ಗುತ್ತಿಗೆ ಕಾರ್ಮಿಕರು ಪ್ರತಿ ಪಾಳಿಯಲ್ಲಿ ಪ್ರತಿ ವಿಭಾಗದಲ್ಲಿ ಕೆಲಸ ಪ್ರಾರಂಭವಾಗುವ 15 ನಿಮಿಷ ಪೂರ್ವದಲ್ಲಿ ಹಾಜರಿರುವಂತೆ ಕಡ್ಡಾಯವಾಗಿ ನೋಡಿಕೊಳ್ಳತಕ್ಕದ್ದು.

**(27)** ಗುತ್ತಿಗೆದಾರನು ಪ್ರತಿದಿನದ ಪಾಳಿಯ ಅವಧಿ ಪೂರ್ವದಲ್ಲಿ ನಿಗದಿತ ಸಂಖ್ಯೆಯಷ್ಟು ಮಾತ್ರ ಕೆಲಸಗಾರರನ್ನು ಗುರುತಿಸಿ ಡೇರಿ / ಶೀಥಲೀಕರಣ ಕೇಂದ್ರದ ಒಳಗೆ ಬಿಡುವುದು. ಮಹಿಳಾ ಕಾರ್ಮಿಕರೂ ಸೇರಿದಂತೆ ಕೆಲಸಗಾರರನ್ನು ಕೆಲಸದ ವೇಳೆಯಲ್ಲಿ ಅಥವಾ ಕೆಲಸದ ಜಾಗದಿಂದ ಹೊರಗೆ ಹೋಗುವಾಗ ಅವರನ್ನು ದೈಹಿಕವಾಗಿ ತಪಾಸಣೆ ಮಾಡುವ ಅಧಿಕಾರವನ್ನು ಒಕ್ಕೂಟದ ಅಧಿಕಾರಿಗಳು ಅಥವಾ ಭದ್ರತಾ ವಿಭಾಗದವರು ಹೊಂದಿರುತ್ತಾರೆ.

**(28)** ಗುತ್ತಿಗೆ ಕೆಲಸಗಾರರು ತಮಗೆ ನಿರ್ಧಿಷ್ಟ ಪಡಿಸಿದ ಜಾಗ / ವೇಳೆಯನ್ನು ಬಿಟ್ಟು ಹೊರಗಡೆ ಅಲೆದಾಡದಂತೆ ಗಾಳಿ ವರ್ತಮಾನ ಸುಳ್ಳು ವದಂತಿಗಳನ್ನು ಹಬ್ಬಿಸದಂತೆ ಗುಂಪುಗಾರಿಕೆ ಕೆಲಸಗಳನ್ನು ಮಾಡದಂತೆ ಕಾಂಟ್ರಾಕ್ಟ್‌ದಾರನು ತನ್ನ ಕೆಲಸಗಾರರಿಗೆ ಮುನ್ನೆಚ್ಚರಿಕೆ ನೀಡಬೇಕು ಮತ್ತು ಅದರಂತೆ ನಿರ್ವಹಿಸುವ ಜವಾಬ್ದಾರಿ ಗುತ್ತಿಗೆದಾರನದ್ದಾಗಿರುತ್ತದೆ.

**(29)** ಗುತ್ತಿಗೆದಾರನು ಗುತ್ತಿಗೆ ಲೇಬರ್ (ರೆಗ್ಯೂಲೇಷನ್ ಮತ್ತು ಅಬಾಲಿಷನ್) ಕಾಯಿದೆ ಪ್ರಕಾರ ಸೂಕ್ತ ಅಧಿಕಾರಿಯವರಿಂದ ಗುತ್ತಿಗೆ ಮಂಜೂರಾತಿ ಆದೇಶ ಹೊರಡಿಸಿದ1 ತಿಂಗಳ ಒಳಗಾಗಿ ಲೈಸೆನ್ಸ್ ಪಡೆಯಬೇಕು. ಇದರ ದೃಢೀಕೃತ ಪ್ರತಿಯನ್ನು ಒಕ್ಕೂಟಕ್ಕೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಗುತ್ತಿಗೆ ಆದೇಶವನ್ನು ರದ್ದುಪಡಿಸಲಾಗುವುದು ಹಾಗೂ ಸದರಿ ಕಾಯಿದೆ ಪ್ರಕಾರ ಅಗತ್ಯ ರಿಜಿಸ್ಟರ್ ಹಾಗೂ ದಾಖಲೆಗಳನ್ನು ಇಡುವುದು ಮತ್ತು ಅವುಗಳನ್ನು ತಪಾಸಣೆಯ ಸಮಯದಲ್ಲಿ ಹಾಜರುಪಡಿಸುವುದು.

**(30)** ಗುತ್ತಿಗೆದಾರರು ಕಾಲಕಾಲಕ್ಕೆ ಜಾರಿಯಲ್ಲಿರುವ ಸರಕು ಮತ್ತು ಸೇವಾ ತೆರಿಗೆ(GST) ಅನ್ನು ಸರ್ಕಾರಕ್ಕೆ ಪಾವತಿಸಬೇಕು. ಪಾವತಿಸಿದ ಬಗ್ಗೆ ಸೂಕ್ತ ದಾಖಲೆಗಳನ್ನು ಒದಗಿಸುವುದು. ಗುತ್ತಿಗೆದಾರರು ಸರಕು ಮತ್ತು ಸೇವಾ ತೆರಿಗೆ(GST) ಪಾವತಿಸದೇ ವಿಳ0ಬ ಮಾಡಿ ಒಕ್ಕೂಟವು ಪಾವತಿಸಬೇಕಾದ ಸ0ದರ್ಭದಲ್ಲಿ ಒಕ್ಕೂಟವು ಇದಕ್ಕೆ ಸ0ಬ0ಧಿಸಿದ0ತೆ ದ0ಡ, ಬಡ್ಡಿ ಮು0ತಾದವುಗಳನ್ನು ಪಾವತಿಸಿದಲ್ಲಿ ಅದನ್ನು ಗುತ್ತಿಗೆದರರ ಬಿಲ್ ಮೊಬಲಗಿನಲ್ಲಿ ಕಟಾಯಿಸಿಕೊಳ್ಳಲಾಗುವುದು.

(31) ಗುತ್ತಿಗೆದಾರನು ತನಗೆ ನೀಡಿದ ಆದೇಶದ ಪ್ರಕಾರ / ಸೂಚಿಸುವಂತೆ ಗುತ್ತಿಗೆ ಕೆಲಸಗಾರರನ್ನು ನೇಮಿಸಿ ಕೆಲಸವನ್ನು ನಿರ್ವಹಿಸಬೇಕು. ಕೆಲಸಕ್ಕೆ ನಿಗದಿಪಡಿಸಿದ ಎಲ್ಲಾ ಕಾರ್ಮಿಕರನ್ನು ಪಿ.ಎಫ್., ಇ.ಎಸ್.ಐ,ಇ.ಎಲ್, ಜಿ.ಹೆಚ್, ಬೋನಸ್ ಮುಂತಾದ ಎಲ್ಲಾ ಶಾಸನಬದ್ಧ ಕಾಯ್ದೆಯಡಿಯಲ್ಲಿ ತರುವುದು ಮತ್ತು ಸದರಿ ಸೌಲಭ್ಯಗಳನ್ನು ಅವರಿಗೆ ಲಭ್ಯ ಮಾಡುವುದು. ಪ್ರತಿ ತಿಂಗಳು ಬಿಲ್‌ನ ಜೊತೆಗೆ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ಪಾವತಿಗಳನ್ನು ಪಾವತಿ ಮಾಡಿದ ದಾಖಲೆಗಳನ್ನು ಒದಗಿಸುವುದು. ತಪ್ಪಿದಲ್ಲಿ ಬಿಲ್‌ಗಳನ್ನು ಹಣ ಪಾವತಿಗೆ ಪರಿಗಣಿಸಲಾಗುವುದಿಲ್ಲ.

(32) ಗುತ್ತಿಗೆ ಕಾರ್ಮಿಕರಿಗೆ ಒಕ್ಕೂಟದಲ್ಲಿ ಲಭ್ಯವಿದ್ದ, ಉಪಹಾರ ಗೃಹದಿಂದ ಒಕ್ಕೂಟವು ನಿಗದಿಪಡಿಸುವ ದರದಲ್ಲಿ ಊಟ, ಕಾಫಿ, ಟೀ, ಸೌಲಭ್ಯ ಒದಗಿಸಲಾಗುವುದು.

(33) ಗುತ್ತಿಗೆ ಕಾರ್ಮಿಕರಿಗೆ ಯಾವುದೇ ನೌಕರರ ಸಂಘ, ಟ್ರೇಡ್ ಯೂನಿಯನ್ ಚಟುವಟಿಕೆಯಲ್ಲಿ ಭಾಗವಹಿಸಕೂಡದು.

(34) ಒಕ್ಕೂಟದಲ್ಲಿ ಹಾಲಿನ ಸಂಸ್ಕರಣೆ ಮತ್ತು ಹಾಲಿನ ಉತ್ಪನ್ನಗಳನ್ನು ತಯಾರಿಸಲು ನೇಮಿಸುವ ಗುತ್ತಿಗೆ ನೌಕರರಿಗೆ ಪ್ರಾರಂಭದಲ್ಲಿ ಹಾಗೂ ನಂತರ ಕನಿಷ್ಟ ಆರು ತಿಂಗಳಿಗೊಂದಾವರ್ತಿ ಗುತ್ತಿಗೆದಾರರು ತಮ್ಮ ಖರ್ಚಿನಲ್ಲಿ ವೈದ್ಯಕೀಯ ಪರಿಶೀಲನೆಗೊಳಪಡಿಸಬೇಕಾಗಿರುತ್ತದೆ ಹಾಗೂ ಡೇರಿಯಲ್ಲಿ ಕೆಲಸ ಮಾಡಲು ವೈದ್ಯಕೀಯವಾಗಿ ಅರ್ಹರಿರುವವರನ್ನು ಮಾತ್ರ ಕೆಲಸದಲ್ಲಿ ತೊಡಗಿಸುವುದು.

(35) ಕಾರ್ಮಿಕ ಗುತ್ತಿಗೆದಾರರು ಕೆಲಸಗಾರರನ್ನು ಒದಗಿಸಿರುವ ದಾಖಲೆಗಳನ್ನು, ರಿಜಿಸ್ಟರ್‌ಗಳನ್ನು ನಿರ್ವಹಣೆ ಮಾಡತಕ್ಕದ್ದು ಮತ್ತು ಒಕ್ಕೂಟದ ಅಧಿಕಾರಿಗಳಿಗೆ ಸಂಬಂಧಿಸಿದ ಸರ್ಕಾರಿ ಇಲಾಖೆ ಅಧಿಕಾರಿಗಳಿಗೆ ತಪಾಸಣೆ ವೇಳೆಯಲ್ಲಿ ಅದನ್ನು ಹಾಜರುಪಡಿಸತಕ್ಕದ್ದು.

(36) ಗುತ್ತಿಗೆದಾರನು / ಗುತ್ತಿಗೆದಾರನಿಂದ ನೇಮಿಸಲ್ಪಟ್ಟ ಕಾರ್ಮಿಕನು ನಿಗದಿಪಡಿಸಿದ ಕೆಲಸವನ್ನು ನಿರ್ವಹಿಸದಿದ್ದ ಪಕ್ಷದಲ್ಲಿ ಅಥವಾ ಅವನಿಂದ ಒಕ್ಕೂಟಕ್ಕೆ ಹಾನಿ / ನಷ್ಟ ಉಂಟಾದಲ್ಲಿ ಅಥವಾ ಗುತ್ತಿಗೆದಾರನು ಗುತ್ತಿಗೆಯ ಯಾವುದೇ ಆದೇಶ ಹಾಗೂ ಕರಾರು ಒಪ್ಪಂದಗಳನ್ನು ಉಲ್ಲಂಘನೆ ಮಾಡಿದಲ್ಲಿ ವ್ಯವಸ್ಥಾಪಕ ನಿರ್ದೇಶಕರು ಸೂಕ್ತ ದಂಡವನ್ನು ವಿಧಿಸುವ ಹಕ್ಕನ್ನು ಹೊಂದಿರುತ್ತಾರೆ.

ಗುತ್ತಿಗೆದಾರನು ಕರಾರು ಒಪ್ಪಂದದ ಪ್ರಕಾರ ಕೆಲಸ ನಿರ್ವಹಿಸಲು ಮೇಲಿಂದ ಮೇಲೆ ವಿಫಲವಾದಲ್ಲಿ ಗುತ್ತಿಗೆಯನ್ನು ರದ್ದುಪಡಿಸುವ ಮತ್ತು ಸದರಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಯಲ್ಲಿ ಇರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ಇದಕ್ಕೆ ಗುತ್ತಿಗೆದಾರನು ಬದ್ಧನಾಗಿರುತ್ತಾನೆ. ಗುತ್ತಿಗೆದಾರನು ವಹಿಸಿದ ಕೆಲಸ ನಿರ್ವಹಿಸದೇ ಇದ್ದಲ್ಲಿ ಅದನ್ನು ಬೇರೆಯವರಿಂದ ಒಕ್ಕೂಟ ಮಾಡಿಸಿಕೊಳ್ಳಬಹುದಾಗಿದೆ ಹಾಗೂ ಈ ವೆಚ್ಚವನ್ನು ಗುತ್ತಿಗೆದಾರನು ಭರಿಸಲು ಜವಾಬ್ದಾರನಾಗಿರುತ್ತಾರೆ ಹಾಗೂ ಸದರಿ ದಂಡವನ್ನು ಅವರ ಮಾಸಿಕ ಬಿಲ್ / ಭದ್ರತಾ ಠೇವಣಿಯಲ್ಲಿ ಕಠಾಯಿಸಿಕೊಳ್ಳಲಾಗುವುದು.

(37) ಗುತ್ತಿಗೆದಾರರು ಗುತ್ತಿಗೆ ಕಾರ್ಮಿಕರಿಗೆ ಕಾಲಕಾಲಕ್ಕೆ ಸರ್ಕಾರವು ಜಾರಿಯಲ್ಲಿ ತರುವ ಕನಿಷ್ಟ ವೇತನಕ್ಕಿಂತ ಕಡಿಮೆ ಇಲ್ಲದಂತೆ ವೇಜ್ ಪೀರಿಯಡ್ ಮುಗಿದ 10 ದಿನಗಳೊಳಗಾಗಿ ವೇತನ ಪಾವತಿಸತಕ್ಕದ್ದು.

(38) ಕಾರ್ಮಿಕರಿಗೆ ಕಾಯ್ದೆ ಅಡಿ ವಾರಕ್ಕೆ ಒಂದು ದಿನ ಪೇಡ್ ವೀಕ್ಲಿ ಆಫ್ ನೀಡಬೇಕಾಗಿರುತ್ತದೆ. ಟೆಂಡರಿನಲ್ಲಿ ನಮೂದಿಸಿದ ದರವು ಒಂದು ತಿಂಗಳಿನ ಅವಧಿಗೆ ಆಗಿದ್ದು, ಗುತ್ತಿಗೆದಾರರು ಕಾರ್ಮಿಕರಿಗೆ ತಿಂಗಳಲ್ಲಿ 04 ದಿನಗಳ ವೀಕ್ಲಿ ಆಫ್ ಸೇರಿದಂತೆ ಮಾಸಿಕ ಕನಿಷ್ಟ ವೇತನವನ್ನು ಪಾವತಿಸುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಯಶಸ್ವಿ ಟೆಂಡರ್‌ದಾರರು ಪ್ರಸ್ತುತ ಟೆಂಡರ್‌ನಲ್ಲಿ ನಮೂದಿಸುವ ದರವು ಸರ್ಕಾರವು ಕಾಲಕಾಲಕ್ಕೆ ಪರಿಷ್ಕರಿಸುವ ಕನಿಷ್ಟ ವೇತನ + ವಿ.ಡಿ.ಎ ಮೊತ್ತಕ್ಕಿಂತ ಕಡಿಮೆಯಾದಲ್ಲಿ ವ್ಯತ್ಯಾಸದ ಶಾಸನಬದ್ಧ ಮೊತ್ತವನ್ನು ಮಾತ್ರ ಗುತ್ತಿಗೆದಾರರಿಗೆ ಪಾವತಿಗೆ ಪರಿಗಣಿಸಲಾಗುವುದು.

(39) ಗುತ್ತಿಗೆದಾರರು ಕಾಲಕಾಲಕ್ಕೆ ಸರ್ಕಾರವು ಜಾರಿಗೆ ತರುವ ವಿ.ಡಿ.ಎ. ದರದಂತೆ ಕನಿಷ್ಟ ವೇತನವನ್ನು ಲೆಕ್ಕ ಹಾಕಿ ಕಾರ್ಮಿಕರಿಗೆ ಹಾಗೂ ಪಿ.ಎಫ್. ಇ.ಎಸ್.ಐ. ವಂತಿಕೆಯನ್ನು ಆಯಾ ಸಂಸ್ಥೆಗಳಿಗೆ ಜಮಾ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ.

(40) ಪೋಲೀಸ್ ಇಲಾಖೆಯಲ್ಲಿ ಕ್ರಿಮಿನಲ್ ರೆಕಾರ್ಡ್ ಹೊಂದಿದ ಅಥವಾ ಒಕ್ಕೂಟದಿಂದ ಹಿಂದೆ ಯಾವುದೇ ಕಾರಣಗಳಿಗಾಗಿ ವಜಾ ಮಾಡಲ್ಪಟ್ಟ ಕಾರ್ಮಿಕರನ್ನು / ಮಾಜಿ ಭದ್ರತಾ ಸಿಬ್ಬಂದಿಗಳನ್ನು ಗುತ್ತಿಗೆ ಕಾರ್ಮಿಕರನ್ನಾಗಿ ಕೆಲಸಕ್ಕೆ ನಿಯೋಜಿಸುವಂತಿಲ್ಲ.

(41) ಗುತ್ತಿಗೆದಾರರು ಗುತ್ತಿಗೆ ಕಾರ್ಮಿಕರನ್ನು ನಿಯೋಜಿಸುವಾಗ ಅವರ ಫೋಟೋದೊಂದಿಗಿನ ಬಯೋಡೇಟಾ ಮತ್ತು ನೇಮಕಾತಿ ಆದೇಶ ಪ್ರತಿಯೊಂದಿಗೆ ಈ ಕಚೇರಿಗೆ ಸಲ್ಲಿಸಬೇಕಾಗುತ್ತದೆ.

(42) **ಕಮರ್ಷಿಯಲ್ ಟೆಂಡರ್‌ನಲ್ಲಿ ದರ ನಮೂದಿಸುವ ಬಗ್ಗೆ.**

**ಕರ್ನಾಟಕ ಸರ್ಕಾರವು ದಿನಾಂಕ: 01–04–2022 ರಲ್ಲಿ ಪ್ರೊಕ್ಯೂರ್‌ಮೆಂಟ್, ಪ್ರೋಸೆಸಿಂಗ್ ಅಂಡ್ ಡಿಸ್ಟ್ರಿಬ್ಯೂಷನ್ ಆಫ್ ಮಿಲ್ಕ್ ಉದ್ದಿಮೆಯಲ್ಲಿ ಕೆಲಸ ನಿರ್ವಹಿಸುವ ಕುಶಲ, ಅರೆ ಕುಶಲ ಮತ್ತು ಕುಶಲರಲ್ಲದ ಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಟ ವೇತನದ ವಿವರ ಈ ಕೆಳಕಂಡಂತೆ ಇರುತ್ತದೆ.**

I)

| ವಲಯ–3 | | | | | |
|---|---|---|---|---|---|
| ವಿವರ | ಕುಶಲ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಸೇರಿ) | ಅರೆ ಕುಶಲ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಸೇರಿ) | ಕುಶಲರಲ್ಲದ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಸೇರಿ) | ಕುಶಲರಲ್ಲದ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಹೊರತುಪಡಿಸಿ) | ಕಂಪ್ಯೂಟರ್ ಆಪರೇಟರ್ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಹೊರತುಪಡಿಸಿ) |
| Basic | 10010.00 | 9750.00 | 9100.00 | 9100.00 | 11050.00 |
| DA | 2631.60 | 2631.60 | 2631.60 | 2631.60 | 2631.60 |
| Total (Basic+DA) | 12641.60 | 12381.60 | 11731.60 | 11731.60 | 13681.60 |
| With Off reliever | 2106.93 | 2063.60 | 1955.27 | 0.00 | 0.00 |
| Total | 14748.53 | 14445.20 | 13686.87 | 11731.60 | 13681.60 |
| PF (Basic+DA+Wo*13%) | 1917.31 | 1877.88 | 1779.29 | 1525.11 | 1778.61 |
| ESI (Basic+DA+Wo+GH*3.25%) | 492.64 | 482.51 | 457.18 | 393.50 | 458.90 |
| EL (Basic+DA+Wo/30*18.25/12) | 747.67 | 732.29 | 693.85 | 686.22 | 800.29 |
| GH (Basic+DA+Wo/30*10/12) | 409.68 | 401.26 | 380.19 | 376.01 | 438.51 |
| Bonus (Basic+DA+Wo*8.33%) | 1228.55 | 1203.29 | 1140.12 | 977.24 | 1139.68 |
| Grand Total | 19544.39 | 19142.42 | 18137.49 | 15689.68 | 18297.59 |

**II)**

| ವಲಯ–2 | | |
|---|---|---|
| ವಿವರ | ಕುಶಲರಲ್ಲದ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಹೊರತುಪಡಿಸಿ) | ಕಂಪ್ಯೂಟರ್ ಆಪರೇಟರ್ ಕಾರ್ಮಿಕರಿಗೆ ನಿಗದಿಪಡಿಸಿರುವ ಮೊಬಲಗು (ಆಫ್ ರಿಲೀವರ್ ಹೊರತುಪಡಿಸಿ) |
| Basic | 9750.00 | 11830.00 |
| DA | 2631.60 | 2631.60 |
| Without off reliever | 0.00 | 0.00 |
| Total | 12381.60 | 14461.60 |
| PF (Basic+DA+Wo*13%) | 1609.61 | 1880.01 |
| ESI (Basic+DA+Wo+GH*3.25%) | 415.30 | 485.07 |
| EL (Basic+DA+Wo/26*18.25/12) | 724.24 | 845.91 |
| GH (Basic+DA+Wo/26*10/12) | 396.85 | 463.51 |
| Bonus (Basic+DA+Wo*8.33%) | 1031.39 | 1204.65 |
| Grand Total | 16558.99 | 19340.75 |

1) ಎ ತುಂಡು ಗುತ್ತಿಗೆ ಕೆಲಸಗಳಿಗೆ ಕ್ರ.ಸಂ I ರ ವಲಯ–3 ರಲ್ಲಿ ಕುಶಲ, ಅರೆ ಕುಶಲ ಮತ್ತು ಕುಶರಲ್ಲದ ಕಾರ್ಮಿಕರಿಗೆ (ಆಫ್ ರಿಲೀವರ್ ಸೇರಿ) ನಮೂದಿಸಿರುವ ದರ
2) ಬಿ ತುಂಡು ಗುತ್ತಿಗೆ ಕೆಲಸಗಳಿಗೆ ಕ್ರ.ಸಂ I ರ ವಲಯ–3 (ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ ಮತ್ತು ತಡಗಣಿ ಸಿ.ಸಿ) ಕುಶರಲ್ಲದ ಕಾರ್ಮಿಕರಿಗೆ (ಆಫ್ ರಿಲೀವರ್ ಹೊರತುಪಡಿಸಿ) ಮತ್ತುಕ್ರ.ಸಂ II ರ ವಲಯ–2 ರಲ್ಲಿ (ಚಿತ್ರದುರ್ಗ ಸಿ.ಸಿ) ಕುಶರಲ್ಲದ ಕಾರ್ಮಿಕರಿಗೆ (ಆಫ್ ರಿಲೀವರ್ ಹೊರತುಪಡಿಸಿ) ನಮೂದಿಸಿರುವ ದರ
3) ಸಿ ತುಂಡು ಗುತ್ತಿಗೆ ಕೆಲಸಗಳಿಗೆ ಕ್ರ.ಸಂ I ರ ವಲಯ–3 (ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ ಮತ್ತು ತಡಗಣಿ ಸಿ.ಸಿ) ಕ್ರ.ಸಂ II ರ ವಲಯ–2 ರಲ್ಲಿ (ಚಿತ್ರದುರ್ಗ ಸಿ.ಸಿ) ಕಂಪ್ಯೂಟರ್ ಆಪರೇಟರ್ ಕಾರ್ಮಿಕರಿಗೆ (ಆಫ್ ರಿಲೀವರ್ ಹೊರತುಪಡಿಸಿ) ನಮೂದಿಸಿರುವ ದರ

ಕುಶಲ, ಅರೆ ಕುಶಲ ಮತ್ತು ಕುಶರಲ್ಲದ (ವಲಯ–3 ಮತ್ತು ವಲಯ–2) ಕಾರ್ಮಿಕರಿಗೆ ನಿಗದಿಪಡಿಸಿರುವ ಕನಿಷ್ಟ ವೇತನ ಮತ್ತು ಎಲ್ಲಾ ಶಾಸನಬದ್ಧ ಪಾವತಿಗಳನ್ನೊಳಗೊಂಡಂತೆ ಟೆಂಡರ್‌ನಲ್ಲಿ ನಮೂದಿಸಿರುವ ಕೆಲಸಗಳ ಪರಿಮಾಣ ಹಾಗೂ ಕಾರ್ಮಿಕರ ಸಂಖ್ಯೆಗಳನ್ನು ಪರಿಗಣಿಸಿ ದರ ನಮೂದಿಸುವುದು. ಶೂನ್ಯ ಸರ್ವೀಸ್ ಚಾರ್ಜ್ ನಮೂದಿಸುವ ಟೆಂಡರ್‌ದಾರರ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಏಕ ರೂಪದ ಸರ್ವೀಸ್ ಚಾರ್ಜ್ ಅನ್ನು ನಮೂದಿಸಿರುವ ಟೆಂಡರ್‌ದಾರರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅವರ ಕಾರ್ಯಕ್ಷಮತೆ, ತೃಪ್ತಿದಾಯಕ ಸೇವೆ ಮತ್ತು ಅನುಭವದ ಆಧಾರದ ಮೇಲೆ ಪರಿಗಣಿಸಲಾಗುವುದು.

(ಸರಕು ಮತ್ತು ಸೇವಾ ತೆರಿಗೆ ಅನ್ನು ಒಕ್ಕೂಟದಿಂದ ಪಾವತಿಸಲಾಗುವುದು. ಆದ್ದರಿಂದ ಸರಕು ಮತ್ತು ಸೇವಾ ತೆರಿಗೆ ಹೊರತುಪಡಿಸಿ ಕಮರ್ಷಿಯಲ್ ಟೆಂಡರ್‌ನಲ್ಲಿ ದರ ನಮೂದಿಸುವುದು.)

ಸಹಿ/–

ವ್ಯವಸ್ಥಾಪಕ ನಿರ್ದೇಶಕರು

ಗುತ್ತಿಗೆ ಕೆಲಸಕ್ಕೆ ಸಂಬಂಧಿಸಿದಂತೆ ಈ ಮೇಲೆ ತಿಳಿಸಿದ ಎಲ್ಲಾ ನಿಬಂಧನೆಗಳನ್ನು ಓದಿ ಒಪ್ಪಿರುತ್ತೇನೆ.

ಗುತ್ತಿಗೆದಾರರ ಸಹಿ

ದಿನಾಂಕ: (ಗುತ್ತಿಗೆದಾರರ ಹೆಸರು ಮತ್ತು ವಿಳಾಸ)

(ಟಿಪ್ಪಣಿ: ಮೇಲ್ಕಂಡ ನಿಬಂಧನೆಗಳನ್ನು ಒಪ್ಪಿಕೊಂಡಿರುವುದಕ್ಕೆ ಗುತ್ತಿಗೆದಾರರು ಸಹಿ ಮಾಡಿ ಇದನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು)

## ಅನುಬಂಧ – ‘ ಡಿ ’

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ-577 222**

---

### –: ತುಂಡು ಗುತ್ತಿಗೆಯಲ್ಲಿ ನಿರ್ವಹಿಸಬೇಕಾದ ಕೆಲಸಗಳು:–

**[ನಮೂದಿಸಿದ ಕಾರ್ಮಿಕ ಸಂಖ್ಯೆಯು ಆ ಕೆಲಸಗಳಿಗೆ ದಿನಕ್ಕೆ ಕನಿಷ್ಟ ಒದಗಿಸಬೇಕಾದ ಕಾರ್ಮಿಕ ಸಂಖ್ಯೆ ಆಗಿದ್ದು, ದಿನದ ಎಲ್ಲಾ ಪಾಳಿಗಳಿಗೂ ಸೇರಿದಂತೆ ಇರುತ್ತದೆ.]**

**A) ಶಿವಮೊಗ್ಗ ಮತ್ತು ದಾವಣಗೆರೆ ಡೇರಿಗಳಲ್ಲಿ ಉಪಹಾರ ಗೃಹಗಳ ನಿರ್ವಹಣೆ, ಅಡುಗೆ, ಊಟ, ಉಪಹಾರ ತಯಾರಿಕೆ ಮತ್ತು ವಿತರಣೆ : (ಒದಗಿಸಬೇಕಾದ ಕನಿಷ್ಟ ಕಾರ್ಮಿಕರ ಸಂಖ್ಯೆ:**

**ಶಿವಮೊಗ್ಗ ಡೇರಿ – ಮುಖ್ಯ ಅಡುಗೆಯವರು 1 (ಕುಶಲ ಕಾರ್ಮಿಕರು ವಿತ್ ಆಫ್ ರಿಲೀವರ್ ಸೇರಿ)**
**ಅಡುಗೆಯವರು 2 (ಅರೆ ಕುಶಲ ಕಾರ್ಮಿಕರು ವಿತ್ ಆಫ್ ರಿಲೀವರ್ ಸೇರಿ)**
**ಸಹಾಯಕರು 8 (ಕುಶಲರಲ್ಲದ ಕಾರ್ಮಿಕರು ವಿತ್ ಆಫ್ ರಿಲೀವರ್ ಸೇರಿ)**

**ದಾವಣಗೆರೆ ಡೇರಿ – ಮುಖ್ಯ ಅಡುಗೆಯವರು 1 (ಕುಶಲ ಕಾರ್ಮಿಕರು ವಿತ್ ಆಫ್ ರಿಲೀವರ್ ಸೇರಿ)**
**ಅಡುಗೆಯವರು 1 (ಅರೆ ಕುಶಲ ಕಾರ್ಮಿಕರು ವಿತ್ ಆಫ್ ರಿಲೀವರ್ ಸೇರಿ)**
**ಸಹಾಯಕರು 3 (ಕುಶಲರಲ್ಲದ ಕಾರ್ಮಿಕರು ವಿತ್ ಆಫ್ ರಿಲೀವರ್ ಸೇರಿ)**

- ಶಿವಮೊಗ್ಗ ಡೇರಿಯಲ್ಲಿ ಅಂದಾಜು 60–70 ಬೆಳಿಗ್ಗೆ, ಅಂದಾಜು 30–35 ಸಂಜೆ ಹಾಗೂ ದಾವಣಗೆರೆ ಡೇರಿಯಲ್ಲಿ ಅಂದಾಜು 07–10 ಸಿಬ್ಬಂದಿಯವರಿಗೆ ಪ್ರತಿ ದಿವಸ ಬೆಳಿಗ್ಗೆ 8.00 ಗಂಟೆಗೆ ಉಪಹಾರ ಮತ್ತು ಕಾಫಿ, ಟೀ ಮಾಡಿ ವಿತರಣೆ ಮಾಡುವುದು.
- ಶಿವಮೊಗ್ಗ ಡೇರಿಯಲ್ಲಿ ಅಂದಾಜು 175–200 ಸಿಬ್ಬಂದಿಯವರಿಗೆ ದಾವಣಗೆರೆ ಡೇರಿಯಲ್ಲಿ ಅಂದಾಜು 100 ಸಿಬ್ಬಂದಿಯವರಿಗೆ ಅಡಿಗೆಯನ್ನು ತಯಾರಿಸಿ ಮಧ್ಯಾಹ್ನ 1.00 ರಿಂದ 2.00 ಗಂಟೆಯವರೆಗೆ ವಿತರಿಸುವುದು.
- ಎಲ್ಲಾ ಪಾತ್ರೆಗಳು ಅಡಿಗೆ ಮನೆ ಊಟದ ಹಾಲ್ ಸ್ವಚ್ಛಗೊಳಿಸುವುದು.
- ಪ್ರತಿ ದಿನ ಬೆಳಿಗ್ಗೆ 10.30 ಮತ್ತು ಸಂಜೆ 4.00 ಗಂಟೆಗೆ ಕಾಫಿ, ಟೀ ತಯಾರಿಸಿ ವಿಭಾಗಗಳಿಗೆ ವಿತರಿಸುವುದು (ಆಫೀಸ್ ಮತ್ತು ಪ್ಲಾಂಟ್‌ಗಳಿಗೆ)
- ಪ್ರತಿ ದಿನ ರಾತ್ರಿ ಪಾಳಿಯಲ್ಲಿ ಎಲ್ಲಾ ಸಿಬ್ಬಂದಿಯವರಿಗೆ ಮತ್ತು ಎಲ್ಲಾ ಗುತ್ತಿಗೆ ನೌಕರರಿಗೆ ರಾತ್ರಿ 10.30 ಮತ್ತು 1.00 ಗಂಟೆಗೆ ಟೀಯನ್ನು ತಯಾರಿಸಿಕೊಂಡು ಪ್ಲಾಂಟ್‌ನಲ್ಲಿ ವಿತರಿಸುವುದು. ಮತ್ತು ಮೊಸರು ಮಾಡಿ ಕಪ್ಪುಗಳಿಗೆ ತುಂಬಿಡುವುದು ಮತ್ತು ಸ್ವಚ್ಛಗೊಳಿಸುವುದು.
- ಒಕ್ಕೂಟದ ಯಾವುದೇ ಸಭೆ ಸಮಾರಂಭಗಳಿಗೆ ಬೇಡಿಕೆ ನೀಡಿದಷ್ಟು ಊಟ ಮತ್ತು ಕಾಫಿ, ಟೀ ತಯಾರಿಸಿ ವಿತರಿಸುವುದು.
- ಪ್ರತಿ ತಿಂಗಳ ಕೊನೆಯಲ್ಲಿ ಮುಂದಿನ ತಿಂಗಳಿಗೆ ದಿನಸಿ ಸಾಮಾಗ್ರಿಗಳ ಬೇಡಿಕೆ ನೀಡುವುದು.
- ಪ್ರತಿ ತಿಂಗಳು ಉಪಹಾರ ಗೃಹದಲ್ಲಿನ ಎಲ್ಲಾ ಪಾತ್ರೆಗಳ ಮತ್ತು ಪೀಠೋಪಕರಣಗಳನ್ನು ಲೆಕ್ಕ ಕೊಡುವುದು.

- ಇದಕ್ಕೆ ಸಂಬಂಧಿಸಿದ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ವಿಭಾಗದ ಮೇಲ್ವಿಚಾರಕರ ಸೂಚನೆಯಂತೆ ನಿರ್ವಹಿಸುವುದು.
- ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸಿದಲ್ಲಿ ಅನುಪಾತದಲ್ಲಿ ಸಂಭಾವನೆಯನ್ನು ಕಠಾವು ಮಾಡಲಾಗುವುದು.

**B) ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಮೇವಿನ ತಾಕುಗಳು, ಗಾರ್ಡನ್ ಹಾಗೂ ಔಷಧಿ ಸಸ್ಯಗಳ ತಾಕುಗಳ ಕೆಲಸಗಳ ನಿರ್ವಹಣೆ:**

**(ಒದಗಿಸಬೇಕಾದ ಕನಿಷ್ಟ ಕಾರ್ಮಿಕರ ಸಂಖ್ಯೆ: ಶಿವಮೊಗ್ಗ ಡೇರಿ: ಗಾರ್ಡನ್–02, ತಾಕುಗಳಿಗೆ–04 ದಾವಣಗೆರೆ ಡೇರಿ–01, ಚಿತ್ರದುರ್ಗ ಸಿ.ಸಿ–01 ಮತ್ತು ತಡಗಣಿ ಸಿ.ಸಿ–01)**

**ಬಹುವಾರ್ಷಿಕ ಮೇವಿನ ಬೆಳೆ ಬೀಜೋತ್ಪಾದನಾ ತಾಕು ನಿರ್ವಹಣೆ:** ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರದ ಆವರಣದಲ್ಲಿ ಕ್ರಮವಾಗಿ ಅಂದಾಜು 2 ಎಕರೆ, 1 $^{1/4}$ ಎಕರೆ, $^{1/2}$ ಎಕರೆ, ಮತ್ತು $^{3/4}$ ಎಕರೆ ಪ್ರದೇಶದಲ್ಲಿ ಬಹು ವಾರ್ಷಿಕ ಮೇವಿನ ಬೆಳೆ CO-3 ಬೀಜೋತ್ಪಾದನೆ ಮಾಡುತ್ತಿದ್ದು, ಸದರಿ ತಾಕು ನಿರ್ವಹಣೆ ಮಾಡಲು ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ.

- ಮೇವಿನ ತಾಕುಗಳ ಪ್ರದೇಶದಲ್ಲಿನ ಕಳೆ ತೆಗೆಯುವುದು. ನೀರಿನ ಕಾಲುವೆಗಳನ್ನು ಸ್ವಚ್ಛಗೊಳಿಸುವುದು. ಅಂತರ ಬೇಸಾಯದ ನಂತರ ಸಾಲುಗಳಿಗೆ ಮಣ್ಣು ಏರಿಸುವುದು. ಕಾಲಕಾಲಕ್ಕೆ ತಾಕುಗಳಿಗೆ ನೀರು ಹಾಯಿಸುವುದು. ಸಂಘಗಳ ಬೇಡಿಕೆಯನುಸಾರ ಬಿತ್ತನೆ ಬೀಜ ಕಠಾವು ಮಾಡಿ ಕಂತೆಗಳನ್ನು ಮಾಡಿ ಸಾಗಾಣಿಕಾ ವಾಹನಗಳಿಗೆ ಲೋಡ್ ಮಾಡುವುದು. ಬಿತ್ತನೆ ಬೀಜ ಕಠಾವು ಮಾಡಿದ ನಂತರ ತಾಕುಗಳನ್ನು ಸ್ವಚ್ಛಗೊಳಿಸಿ ಅಂತರ ಬೇಸಾಯ ಮಾಡಿ, ನೀರು ಮತ್ತು ಗೊಬ್ಬರದ ವ್ಯವಸ್ಥೆ ಮಾಡುವುದು.

  ಸಂಬಂಧಪಟ್ಟ ಅಧಿಕಾರಿಗಳು ಸೂಚಿಸುವ ಎಲ್ಲಾ ಬೇಸಾಯ ಕ್ರಮಗಳನ್ನು ತಪ್ಪದೇ ಅನುಸರಿಸುವುದು. ಇದಕ್ಕೆ ಸಂಬಂಧಿಸಿದ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ವಿಭಾಗದ ಮೇಲ್ವಿಚಾರಕರ ಸೂಚನೆಯಂತೆ ನಿರ್ವಹಿಸುವುದು.

**ಗಾರ್ಡನ್ ನಿರ್ವಹಣೆ:** ಶಿವಮೊಗ್ಗ ಡೇರಿ ಆವರಣದಲ್ಲಿ ಅಂದಾಜು 2 ಎಕರೆ ವಿಸ್ತೀರ್ಣದ 3 ಭಾಗಗಳಲ್ಲಿರುವ ಲಾನ್‌ಗಳನ್ನು ಮತ್ತು ಇನ್ನಿತರೆ ಗಿಡಗಳಿಗೆ 2 ದಿನಕ್ಕೊಮ್ಮೆ ಸ್ಪ್ರಿಂಕ್ಲರ್ ಹಾಗೂ ಪೈಪ್ ಸಹಾಯದಿಂದ ನೀರು ಹಾಯಿಸುವುದು. 15 ದಿನಗಳಿಗೊಮ್ಮೆ ಲಾನ್ ಮೂವರ್ ಸಹಾಯದಿಂದ ಹುಲ್ಲನ್ನು ಟ್ರಿಮಿಂಗ್ ಮಾಡುವುದು. ಗಾರ್ಡನ್‌ಗೆ ಹೊಂದಿಕೊಂಡಂತೆ ಇರುವ ರಸ್ತೆ ಬದಿಯಲ್ಲಿನ ಹುಲ್ಲು, ಅನುಪಯುಕ್ತ ಗಿಡಗಂಟೆಗಳನ್ನು ತೆಗೆಯುವುದು. ಮತ್ತು ಬೆಳೆಸಲಾದ ಗಿಡಗಳನ್ನು ಸೂಕ್ತವಾಗಿ ಕತ್ತರಿಸಿ ಸ್ವಚ್ಛವಾಗಿಡುವುದು. ಪಾತಿಯಲ್ಲಿರುವ ಅನುಪಯುಕ್ತ ವಸ್ತುಗಳನ್ನು ಎಲೆ ಇನ್ನಿತರೆ ಕಸಕಡ್ಡಿಗಳನ್ನು ತೆಗೆದು ಶುಚಿಗೊಳಿಸುವುದು ಮತ್ತು ಇದಕ್ಕೆ ಸಂಬಂಧಿಸಿದ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ವಿಭಾಗದ ಮೇಲ್ವಿಚಾರಕರ ಸೂಚನೆಯಂತೆ ನಿರ್ವಹಿಸುವುದು.

**ಮೇವು ಬೆಳೆಗಳ ಪ್ರಾತ್ಯಕ್ಷತಾ ತಾಕು ಮತ್ತು ಔಷಧಿ ಸಸ್ಯಗಳ ಪ್ರಾತ್ಯಕ್ಷತೆ ಘಟಕಗಳ ನಿರ್ವಹಣೆ :**

ಶಿವಮೊಗ್ಗ ಡೇರಿ ಆವರಣದಲ್ಲಿ ಅಂದಾಜು ತಲಾ ½ ಎಕರೆ ಪ್ರದೇಶಗಳಲ್ಲಿ ಔಷಧಿ ಸಸ್ಯಗಳ ಪ್ರಾತ್ಯಕ್ಷತಾ ಘಟಕ ಮತ್ತು ಮೇವು ಬೆಳೆಗಳ ಪ್ರತ್ಯಕ್ಷತಾ ಘಟಕಗಳಿದ್ದು, ಸದರಿ ತಾಕುಗಳ ಕಳೆ ನಿಯಂತ್ರಣ, ನೀರು, ಗೊಬ್ಬರದ ವ್ಯವಸ್ಥೆ ನೀರಿನ ಕಾಲುವೆಗಳ ಸ್ವಚ್ಛತೆ, ತಾಕುಗಳಲ್ಲಿನ ಕಾಲುದಾರಿಗಳ ಸ್ವಚ್ಛತೆ ತಾಕುಗಳನ್ನು ಅಗೆದು ಸ್ವಚ್ಛಮಾಡಿ ಹೊಸದಾಗಿ ಮೇವಿನ ಬೀಜಗಳನ್ನು ನಾಟಿ ಮಾಡುವುದು.

ಇದಕ್ಕೆ ಸಂಬಂಧಿಸಿದ ಇತರೆ ಯಾವುದೇ ಕೆಲಸ ಕಾರ್ಯಗಳನ್ನು ವಿಭಾಗದ ಮೇಲ್ವಿಚಾರಕರ ಸೂಚನೆಯಂತೆ ನಿರ್ವಹಿಸುವುದು.

**C) ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆ):**

**(ಒದಗಿಸಬೇಕಾದ ಕಾರ್ಮಿಕರ ಸಂಖ್ಯೆ: ಶಿವಮೊಗ್ಗ ಡೇರಿ–24, ದಾವಣಗೆರೆ ಡೇರಿ–06, ಚಿತ್ರದುರ್ಗ ಶೀತಲೀಕರಣ ಕೇಂದ್ರ–02 ಮತ್ತು ತಡಗಣಿ ಶೀತಲೀಕರಣ ಕೇಂದ್ರ–02)**

ಪಿ.ಯು.ಸಿ / ಪದವಿ ವಿದ್ಯಾರ್ಹತೆ ಹೊಂದಿದ ಮತ್ತು ಕಂಪ್ಯೂಟರ್ ಜ್ಞಾನಹೊಂದಿದ ಕಾರ್ಮಿಕರನ್ನು ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರದ ವಿಭಾಗಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳನ್ನು ವಿಭಾಗಾಧಿಕಾರಿಗಳ ಸೂಚನೆಯಂತೆ ನಿರ್ವಹಿಸಲು ಒದಗಿಸುವುದು.

ಒಕ್ಕೂಟದಲ್ಲಿ ಕಂಪ್ಯೂಟರ್ ಹಾಗೂ ಗಾರ್ಡನ್ ಕೆಲಸಗಳಿಗೆ ಗುತ್ತಿಗೆ ಸಿಬ್ಬಂದಿಗಳ ಅಗತ್ಯತೆಗೆ ತಕ್ಕಂತೆ ಗುತ್ತಿಗೆ ಕಾರ್ಮಿಕರ ಸಂಖ್ಯೆಯನ್ನು ಕಡಿಮೆ ಅಥವಾ ಹೆಚ್ಚಿಗೆ ಮಾಡಬಹುದಾಗಿರುತ್ತದೆ ಮತ್ತು ಅದಕ್ಕೆ ತಕ್ಕಂತೆ ಪ್ರೋರೇಟಾ ಬೇಸಿಸ್‌ನಲ್ಲಿ ಗುತ್ತಿಗೆ ದರಗಳನ್ನು ನೀಡಲಾಗುವುದು.

**ಸಹಿ/–**

**ದಿನಾಂಕ: 02–06–2022** **ವ್ಯವಸ್ಥಾಪಕ ನಿರ್ದೇಶಕರು**

**ಟಿಪ್ಪಣಿ: ಮೇಲ್ಕಂಡ ಕೆಲಸದ ವಿವರಗಳನ್ನು ಒಪ್ಪಿಕೊಂಡಿರುವುದಕ್ಕೆ ಗುತ್ತಿಗೆದಾರರು ಸಹಿ ಮಾಡಿ ಇದನ್ನು ಟೆಂಡರ್‌ನೊಂದಿಗೆ ಸಲ್ಲಿಸುವುದು.**

**" ಮೇಲ್ಕಂಡ ಕೆಲಸದ ವಿವರಗಳನ್ನು ಓದಿ ತಿಳಿದುಕೊಂಡು ಒಪ್ಪಿರುತ್ತೇನೆ."**

**ದಿನಾಂಕ:** **ಟೆಂಡರ್‌ದಾರರ ಸಹಿ ಮತ್ತು ಸೀಲು**

**ಅನುಬಂಧ – ‘ ಇ ’**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ-577 222**

---

**–: ತುಂಡು ಗುತ್ತಿಗೆ ಮೇಲೆ ನಿರ್ವಹಿಸಬೇಕಾದ ಕೆಲಸಗಳು ಈಗಿರುವಂತೆ ಸರಾಸರಿ ಅಂದಾಜು ದಿನವಹಿ ಪ್ರಮಾಣದ ವಿವರಗಳು (ಬದಲಾವಣೆಗೆ ಒಳಪಟ್ಟಿರುತ್ತದೆ) :–**

**A) ಉಪಹಾರ ಗೃಹದ ನಿರ್ವಹಣೆ, ಅಡುಗೆ ಮತ್ತು ಊಟ, ಉಪಹಾರ ತಯಾರಿಕೆ ಮತ್ತು ವಿತರಣೆ :**

ಶಿವಮೊಗ್ಗ ಡೇರಿ

ಕನಿಷ್ಟ ಕಾರ್ಮಿಕರ ಸಂಖ್ಯೆ ಮುಖ್ಯ ಅಡುಗೆಯವರು–1, ಸಹಾಯಕ ಅಡುಗೆಯವರು–2, ಸಹಾಯಕರು–8 ಒಟ್ಟು = 11 ಜನ

ದಾವಣಗೆರೆ ಡೇರಿ

ಕನಿಷ್ಟ ಕಾರ್ಮಿಕರ ಸಂಖ್ಯೆ ಮುಖ್ಯ ಅಡುಗೆಯವರು–1, ಸಹಾಯಕ ಅಡುಗೆಯವರು–1, ಸಹಾಯಕರು–3 ಒಟ್ಟು = 05 ಜನ

**B) ಮೇವಿನ ತಾಕುಗಳು, ಗಾರ್ಡನ್ ಹಾಗೂ ಔಷಧಿ ಸಸ್ಯಗಳ ತಾಕುಗಳ ನಿರ್ವಹಣೆ**

**ಬಹುವಾರ್ಷಿಕ ಮೇವಿನ ಬೆಳೆ ಬೀಜೋತ್ಪಾದನಾ ತಾಕು ನಿರ್ವಹಣೆ:** ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರದ ಆವರಣದಲ್ಲಿ ಕ್ರಮವಾಗಿ ಅಂದಾಜು 2 ಎಕರೆ, 1 $^{1/4}$ ಎಕರೆ, $^{1/2}$ ಎಕರೆ, ಮತ್ತು $^{3/4}$ ಎಕರೆ ಪ್ರದೇಶದಲ್ಲಿ ಬಹು ವಾರ್ಷಿಕ ಮೇವಿನ ಬೆಳೆ CO-3 ಬೀಜೋತ್ಪಾದನೆ ಮಾಡುತ್ತಿದ್ದು, ಸದರಿ ತಾಕು ನಿರ್ವಹಣೆ, ನೀರಿನ ವ್ಯವಸ್ಥೆ ಮತ್ತು ಸಂಬಂಧಿಸಿದ ಕೆಲಸಗಳು. ಬಿತ್ತನೆ ಬೀಜ ಕಟಾವು ಮಾಡಿದ ನಂತರ ತಾಕುಗಳನ್ನು ಸ್ವಚ್ಛಗೊಳಿಸಿ ಅಂತರ ಬೇಸಾಯ ಮಾಡಿ, ನೀರು ಗೊಬ್ಬರದ ವ್ಯವಸ್ಥೆ ಮಾಡುವುದು.

**ಮೇವು ಬೆಳೆಗಳ ಪ್ರತ್ಯಕ್ಷತಾ ತಾಕು ಮತ್ತು ಔಷಧಿ ಸಸ್ಯಗಳ ಪ್ರಾತ್ಯಕ್ಷತೆ ಘಟಕಗಳ ನಿರ್ವಹಣೆ:**
ಶಿವಮೊಗ್ಗ ಡೇರಿ ಆವರಣದಲ್ಲಿ ಅಂದಾಜು ತಲಾ 2 ಎಕರೆ ಪ್ರದೇಶಗಳಲ್ಲಿ ಔಷಧಿ ಸಸ್ಯಗಳ ಪ್ರಾತ್ಯಕ್ಷತಾ ಘಟಕ ಮತ್ತು ಮೇವು ಬೆಳೆಗಳ ಪ್ರತ್ಯಕ್ಷತಾ ಘಟಕಗಳಿದ್ದು, ಸದರಿ ತಾಕುಗಳ ಕಳೆ ನಿಯಂತ್ರಣ, ನೀರು, ಗೊಬ್ಬರದ ವ್ಯವಸ್ಥೆ ನೀರಿನ ಕಾಲುವೆಗಳ ಸ್ವಚ್ಛತೆ,

**ಗಾರ್ಡನ್ ನಿರ್ವಹಣೆ:** ಶಿವಮೊಗ್ಗ ಡೇರಿ ಆವರಣದಲ್ಲಿ ಅಂದಾಜು 2 ಎಕರೆ ವಿಸ್ತೀರ್ಣದ 3 ಭಾಗಗಳಲ್ಲಿರುವ ಲಾನ್‌ಗಳ ನಿರ್ವಹಣೆ ಮತ್ತು ಇನ್ನಿತರೆ ಗಿಡಗಳಿಗೆ 2 ದಿನಕ್ಕೊಮ್ಮೆ ಸ್ಪ್ರಿಂಕ್ಲರ್ ಹಾಗೂ ಪೈಪ್ ಸಹಾಯದಿಂದ ನೀರು ಹಾಯಿಸುವುದು. ಲಾನ್ ಮೂವರ್ ಸಹಾಯದಿಂದ ಹುಲ್ಲನ್ನು ಟ್ರಿಮಿಂಗ್ ಮಾಡುವುದು. ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸಿದಲ್ಲಿ ಅನುಪಾತದಲ್ಲಿ ಸಂಭಾವನೆಯನ್ನು ಕಟಾವು ಮಾಡಲಾಗುವುದು.

**C) <u>ಕಂಪ್ಯೂಟರ್ ಆಪರೇಟರ್ ಕೆಲಸಗಳು:</u>**

ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರದಲ್ಲಿ ಅಗತ್ಯವಿರುವ ವಿಭಾಗಗಳಲ್ಲಿ ಅಂದರೆ ಮಾರುಕಟ್ಟೆ, ಶೇಮತಾಂ, ಉಗ್ರಾಣ, ಹಣಕಾಸು, ಖರೀದಿ, ವ್ಯ(ಡಿಟಿ), ಎಂಐಎಸ್ ಮತ್ತು ಸಂಸ್ಕರಣಾ ಮುಂತಾದ ವಿಭಾಗಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳು.

**ಮೇಲ್ಕಂಡ ವಿವರಗಳನ್ನು ಗಮನಿಸಿದ್ದೇನೆ.**

**ದಿನಾಂಕ:** **ಗುತ್ತಿಗೆದಾರರ ಸಹಿ ಹಾಗೂ ಸೀಲ್**

**ಅನುಬಂಧ – ' ಎಫ್ '**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**
**ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222**

---

## –: ಕಮರ್ಷಿಯಲ್ ಟೆಂಡರ್ ಭಾಗ–2 :–

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ತುಂಡು ಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು**

| | |
|---|---|
| ಗೆ, | ಇಂದ, |
| ವ್ಯವಸ್ಥಾಪಕ ನಿರ್ದೇಶಕರು | (ಪೂರ್ಣ ಹೆಸರು ಮತ್ತು ಅಂಚೆ ವಿಳಾಸ |
| ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ | ದೂರವಾಣಿ ಸಂಖ್ಯೆ ನಮೂದಿಸುವುದು) |
| ಜಿಲ್ಲಾ ಸಹಕಾರ ಹಾಲು ಒಕ್ಕೂಟ ನಿ., | ____________________ |
| ಮಾಚೇನಹಳ್ಳಿ, ನಿದಿಗೆ (ಅಂಚೆ), | ____________________ |
| ಶಿವಮೊಗ್ಗ–577 222 | ____________________ |

ಮಾನ್ಯರೆ,

ಟೆಂಡರ್ ಪ್ರಕಟಣೆ ಸಂಖ್ಯೆ:ಶಿದಾಚಿಸಹಾಒ/ಆಡಳಿತ-4/ತು.ಗು.ಟೆಂ/1879/2022–23 ದಿನಾಂಕ: 02–06–2022 ರ ಅನುಸಾರವಾಗಿ ನಾನು ಈ ಟೆಂಡರ್‌ಗೆ ಸಂಬಂಧಿಸಿದಂತೆ ಟೆಕ್ನಿಕಲ್ ಟೆಂಡರ್‌ನಲ್ಲಿರುವ ನಿಯಮ ಹಾಗೂ ನಿಬಂಧನೆಗಳನ್ನು ಓದಿ ಅರ್ಥ ಮಾಡಿಕೊಂಡು ಒಕ್ಕೂಟದ ಶಿವಮೊಗ್ಗಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ತುಂಡು ಗುತ್ತಿಗೆ ಕೆಲಸವನ್ನು ಎರಡು ವರ್ಷಗಳ ಅವಧಿಗೆ ನಿರ್ವಹಿಸಲು ಒಪ್ಪಿ ಸರ್ಕಾರವು ಕನಿಷ್ಟ ವೇತನ ಕಾಯ್ದೆ ಪ್ರಕಾರ ನಿಗದಿಪಡಿಸಿದ ವೇತನವನ್ನು ಪರಿಗಣನೆಗೆ ತೆಗೆದುಕೊಂಡು ಈ ಕೆಳಗೆ ತಿಳಿಸಿದಂತೆ ಕನಿಷ್ಟ ದರಗಳನ್ನು ನಮೂದಿಸಿ ಕಮರ್ಷಿಯಲ್ ಟೆಂಡರ್‌ನ್ನು ಸಲ್ಲಿಸುತ್ತಿದ್ದೇನೆ ಕಮರ್ಷಿಯಲ್ ಟೆಂಡರ್‌ನಲ್ಲಿ ನಮೂದಿಸಿದ ದರಗಳು ಟೆಂಡರ್ ಓಪನ್ ಮಾಡಿದ 90 ದಿನಗಳವರೆಗೆ ಜಾರಿಯಲ್ಲಿ ಇರುತ್ತವೆ ಎಂದು ಒಪ್ಪಿರುತ್ತೇನೆ ಮತ್ತು ಸದರಿ ದರಗಳಿಗೆ ನಾನು ಬದ್ಧನಾಗಿರುತ್ತೇನೆ.

ದಿನಾಂಕ: ಟೆಂಡರ್‌ದಾರರ ಸಹಿ ಮತ್ತು ಸೀಲು

**<u>ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ(ಅಂಚೆ) ಶಿವಮೊಗ್ಗ-577 222</u>**

**<u>ತುಂಡು ಗುತ್ತಿಗೆ ಕೆಲಸಗಳಿಗೆ ಸಲ್ಲಿಸಿದ ಕಮರ್ಷಿಯಲ್ ಟೆಂಡರ್</u>**

**ಟೆಕ್ನಿಕಲ್ ಟೆಂಡರ್‌ನಲ್ಲಿಯ ನಿಯಮ ಹಾಗೂ ನಿಬಂಧನೆಗಳನ್ನು ಓದಿ ಅರ್ಥ ಮಾಡಿಕೊಡು ಮತ್ತು ವರ್ಗೀಕರಿಸಲಾದ ಕೆಳಕಂಡ ತುಂಡು ಗುತ್ತಿಗೆ ಕೆಲಸಗಳಿಗೆ ಸಂಬಂಧಿಸಿದಂತೆ ನಿರ್ವಹಿಸಬೇಕಾದ ಕೆಲಸ ಹಾಗೂ ಪರಿಮಾಣಗಳನ್ನು ಟೆಂಡರ್ ಡಾಕ್ಯೂಮೆಂಟ್‌ಗಳ ಅನುಬಂಧ-ಡಿ ಮತ್ತು ಇ ಗಳಲ್ಲಿಯ ನಿಬಂಧನೆಗಳನ್ನು ಗಣನೆಗೆ ತೆಗೆದುಕೊಂಡು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ತುಂಡು ಗುತ್ತಿಗೆ ಕೆಲಸವನ್ನು ನಿರ್ವಹಿಸಲು ಈ ಕೆಳಕಂಡಂತೆ ಕನಿಷ್ಟ ದರವನ್ನು ನಮೂದಿಸಿರುತ್ತೇನೆ.**

| | |
|---|---|
| **A)** | **<u>ಶಿವಮೊಗ್ಗ ಡೇರಿ ಮತ್ತು ದಾವಣಗೆರೆ ಡೇರಿಗಳಲ್ಲಿ ಉಪಹಾರ ಗೃಹಗಳ ನಿರ್ವಹಣೆ, ಅಡುಗೆ, ಊಟ, ಉಪಹಾರ ತಯಾರಿಕೆ ಮತ್ತು ವಿತರಣೆ:</u>**<br>1) ಶಿವಮೊಗ್ಗ ಡೇರಿ ಉಪಹಾರ ಗೃಹ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>(ಕನಿಷ್ಟ ಕಾರ್ಮಿಕರ ಸಂಖ್ಯೆ: ಮುಖ್ಯ ಅಡಿಗೆಯವರು-1, ಸಹಾಯಕ ಅಡಿಗೆಯವರು-2, ಸಹಾಯಕರು-8 ಒಟ್ಟು-11 ಜನ)<br>2) ದಾವಣಗೆರೆ ಡೇರಿ ಉಪಹಾರ ಗೃಹ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>(ಕನಿಷ್ಟ ಕಾರ್ಮಿಕರ ಸಂಖ್ಯೆ: ಮುಖ್ಯ ಅಡಿಗೆಯವರು-1, ಸಹಾಯಕ ಅಡಿಗೆಯವರು-1, ಸಹಾಯಕರು-3 ಒಟ್ಟು-05 ಜನ) |
| **B)** | **<u>ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಮತ್ತು ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಮೇವಿನ ತಾಕುಗಳು, ಗಾರ್ಡನ್ ಹಾಗೂ ಔಷಧಿ ಸಸ್ಯಗಳ ತಾಕುಗಳ ಕೆಲಸಗಳ ನಿರ್ವಹಣೆ:</u>**<br>1) ಶಿವಮೊಗ್ಗ ಡೇರಿ ತಾಕುಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>2) ದಾವಣಗೆರೆ ಡೇರಿ ತಾಕುಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>3) ಚಿತ್ರದುರ್ಗ ಸಿ.ಸಿ ತಾಕುಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>4) ತಡಗಣಿ ಸಿ.ಸಿ ತಾಕುಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>ಕುಶಲರಲ್ಲದ ಕನಿಷ್ಟ ಕಾರ್ಮಿಕರ ಸಂಖ್ಯೆ ಒಟ್ಟು: 09 (ಶಿವಮೊಗ್ಗ ಡೇರಿಗೆ 06, ದಾವಣಗೆರೆ ಡೇರಿಗೆ 01, ಚಿತ್ರದುರ್ಗ ಸಿ.ಸಿ 01 ಮತ್ತು ತಡಗಣಿ ಸಿ.ಸಿ.ಗೆ 01) |
| **C)** | **<u>ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಚಿತ್ರದುರ್ಗ ಹಾಗೂ ತಡಗಣಿ ಶೀತಲೀಕರಣ ಕೇಂದ್ರಗಳಲ್ಲಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆ:</u>**<br>1) ಶಿವಮೊಗ್ಗ ಡೇರಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>2) ದಾವಣಗೆರೆ ಡೇರಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>3) ಚಿತ್ರದುರ್ಗ ಸಿ.ಸಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>4) ತಡಗಣಿ ಸಿ.ಸಿ ಕಂಪ್ಯೂಟರ್ ಆಪರೇಟರ್ ಕೆಲಸಗಳ ನಿರ್ವಹಣೆಗೆ ತಿಂಗಳಿಗೆ ನಮೂದಿಸಿರುವ ದರ ಒಟ್ಟು ರೂ.<br>ಕಂಪ್ಯೂಟರ್ ಆಪರೇಟರ್ ಕನಿಷ್ಟ ಕಾರ್ಮಿಕರ ಸಂಖ್ಯೆ ಒಟ್ಟು: 34 (ಶಿವಮೊಗ್ಗ ಡೇರಿಗೆ 24, ದಾವಣಗೆರೆ ಡೇರಿಗೆ 06, ಚಿತ್ರದುರ್ಗ ಸಿ.ಸಿ 02 ಮತ್ತು ತಡಗಣಿ ಸಿ.ಸಿ.ಗೆ 02) |

**ದಿನಾಂಕ:** **ಟೆಂಡರ್‌ದಾರರ ಸಹಿ ಮತ್ತು ಸೀಲು.**

**ಸೂಚನೆ: ಮೇಲ್ಕಂಡ ನಮೂನೆಯನ್ನು ಕೇವಲ ಮಾಹಿತಿಗಾಗಿ ನೀಡಲಾಗಿದೆ. ಸಂಬಂಧಿಸಿದಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಇವರು ದಿನಾಂಕ: 21-03-2017 ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗುತ್ತಿಗೆದಾರರು ನಮೂದಿಸುವ ದರಗಳನ್ನು (ಅಂಕಿಗಳಲ್ಲಿ) ಪರಿಗಣಿಸಲಾಗುವುದು. ಬದಲಿಗೆ ಟೆಂಡರ್ ಅನುಬಂಧಗಳು, ನಮೂನೆಗಳು ಹಾಗೂ ಇತರೆ ಯಾವುದೇ ಮಾಧ್ಯಮದ ಮೂಲಕ ನಮೂದಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ.**